ನಿಯಮ 191ರ ಮೇರೆಗೆ ಹಕ್ಕುಚ್ಯುತಿ ಪ್ರಸ್ತಾವ ಮಂಡನೆ (ಅನುಮತಿ ಕೋರಿಕೆ)

ಮಹಿಳಾ ಸದಸ್ಯರ ಬಗ್ಗೆ ಲಂಕೇಶ್ ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಕುರಿತು.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದಂಥ ವಿಷಯವನ್ನು ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಹಿಳೆಯರು ಇವತ್ತು ರಾಜಕೀಯದಲ್ಲಿ ಇರಬೇಕೇ ಅಥವಾ ಬೇಡವೇ ಎನ್ನತಕ್ಕಂಥ ಪ್ರಶ್ನೆ ತಮ್ಮ ಮುಂದೆ ಇದೆ. ಇಡೀ ಸದನ ಇವತ್ತು ತೀರ್ಮಾನ ಮಾಡಬೇಕಾಗಿದೆ. ಈ ಸದನದಲ್ಲಿರತಕ್ಕಂಥ ಮಹಿಳೆಯರೇ ಆಗಲಿ, ಅಥವಾ ಮೇಲ್ಮನೆಯಲ್ಲಿರತಕ್ಕ ಮಹಿಳೆಯರೇ ಆಗಲಿ ಅಥವಾ ರಾಜಕೀಯದಲ್ಲಿರತಕ್ಕಂಥ ಯಾವುದೇ ಒಬ್ಬ ಮಹಿಳೆ ರಾಜಕೀಯಕ್ಕೆ ಬಂದಾಗ ಅವಳು ಕೆಲಸ ಮಾಡಬೇಕಾದರೆ, ಅವರ ಹಕ್ಕು ಬಾಧ್ಯತೆಗೆ ಚ್ಯುತಿ ಬಾರದ ಹಾಗೆ ಹೇಗೆ ನಡೆದುಕೊಳ್ಳಬೇಕು. ಅದನ್ನು ನಾವೂ ಕೂಡ ಕಲಿತುಕೊಂಡು ಬಂದಿದ್ದೇವೆ, ಹಾಗೆಯೇ ಕೆಲಸ ಮಾಡಿಕೊಂಡು ಬಂದಿದ್ದೇವೆ. 20 ವರ್ಷದಿಂದ ರಾಜಕೀಯ ಮಾಡಿಕೊಂಡು ನಾನಾಗಲಿ, ಲೀಲಾದೇವಿಯವರಾಗಲಿ, ಅಥವಾ ಬೇರೆಯವರೆಲ್ಲಾ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಮಾಡಿಕೊಂಡು ಬರುವಂತಹ ಸಂದರ್ಭದಲ್ಲಿ ಆ ಮಹಿಳೆ ಮಾಡತಕ್ಕಂತಹ ಕೆಲಸವನ್ನು ಹಕ್ಕುಚ್ಯುತಿ ಬರತಕ್ಕಂತಹ ರೀತಿಯಲ್ಲಿ ಯಾವುದಾದರೂ ಒಂದುಪತ್ರಿಕೆ ಅದನ್ನು ಪ್ರಕಟಣೆ ಮಾಡಿದಾಗ, ಸರ್ಕಾರ ಅದರ ಬಗ್ಗೆ ಏನೂ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳದೆ ಆ ಪತ್ರಿಕೆ ಹಾಗೆಯೇ ಇರುವುದಕ್ಕೆ ಮುಂದುವರಿಸಿದ್ದೇ ಆದರೆ ಮಹಿಳೆಯರು ಈ ರಾಜಕೀಯದಲ್ಲಿ ಇರಬೇಕಾದಂತಹ ಪರಿಸ್ಥಿತಿ ಹೇಗೆ ಇರಬೇಕು ಎನ್ನುವುದರ ಬಗ್ಗೆ ತಾವು ಗಮನ ಇಡಬೇಕಾಗುತ್ತದೆ. ಸನ್ಮಾನ್ಯ ಸದಸ್ಯರೆ, ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಾನು ಈ ಪತ್ರಿಕೆಯ ಬಗ್ಗೆ ಅಥವಾ ಪತ್ರಿಕೆಯನ್ನು ಪ್ರಕಟಣೆ ಮಾಡತಕ್ಕವರ ಬಗ್ಗೆಯಾಗಲೀ ನಾನು ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀಮಾನ್ ಲಂಕೇಶ್‌ರವರು, ಮಹಾ ಸಾಹಿತಿಗಳಾಗಿದ್ದಾರೆ. ಅವರ ಬಗ್ಗೆ ನಾನು ಹೇಳುತ್ತಿಲ್ಲ, ಅವರ ಸಾಹಿತ್ಯದ ಪ್ರಭುತ್ವದ ಬಗ್ಗೆಯೂ ಕೂಡ ನನಗೇನೂ ಇಲ್ಲ. ಅವರ ಸಾಹಿತ್ಯ ಪ್ರಭುತ್ವ ಎಲ್ಲರಿಗೂ ಕೂಡ ಗೊತ್ತಿದೆ. ಅವರು ತಮ್ಮ ಸಾಹಿತ್ಯದ ಜೀವನದಲ್ಲಿ ಏನಾದರೂ ಮಾಡಿಕೊಂಡು ಹೋಗಲಿ, ಆದರೆ ನಾವು ಮಹಿಳೆಯರು ಅವರ ತಂಟೆಗೆ ಹೋಗಿಲ್ಲ, ಏನೂ ಮಾಡಿಲ್ಲ. ಆದರೆ ಆಗಾಗ್ಗೆ, ಒಮ್ಮೊಮ್ಮೆ ತಮ್ಮ ಪತ್ರಿಕೆಯ ಮುಖಾಂತರ, ತಮ್ಮ ಲೇಖನಿಯ ಮುಖಾಂತರ ಈ ಒಂದು ಪತ್ರಿಕೆಯಲ್ಲಿ ಮಹಿಳಾ ಶಾಸಕಿಯರ ಬಗ್ಗೆ, ಮಹಿಳಾ ಮಂತ್ರಿವರ್ಯರ ಬಗ್ಗೆ, ಪ್ರಕಟಣೆಯನ್ನು ಹೊರಡಿಸತಕ್ಕಂಥ ಸಂದರ್ಭದಲ್ಲಿ ನಿಜಸ್ಥಿತಿಯನ್ನು ಅರಿಯದೆ ಲೆಜಿಟಿಮೇಟ್ ಕ್ರಿಟಿಸಿಸಿಸಂ ಅಲ್ಲವೊ ಅದನ್ನು ಪ್ರಕಟಣೆ ಮಾಡಿದಾಗ ನಾವು ದುಃಖದಿಂದ ತಮ್ಮ ಮುಂದೆ ಈ ವಿಷಯವನ್ನು ತರಬೇಕಾಗಿದೆ. ತಮಗೆ ಒಂದು ನಿದರ್ಶನ ಕೊಡಬೇಕೆಂದರೆ ಅಧ್ಯಕ್ಷರೆ, ಮೊನ್ನೆ ಸನ್ಮಾನ್ಯ ಲಂಕೇಶ್ ಪತ್ರಿಕೆಯ ದಿನಾಂಕ 3ನೇ ಸೆಪ್ಟೆಂಬರ್ 1997ರ ವಾರಪತ್ರಿಕೆಯಲ್ಲಿ ದೊಡ್ಡ ದೊಡ್ಡ ಲೇಖನಗಳನ್ನು ಬರೆದಿದ್ದಾರೆ. ಆ ಪತ್ರಿಕೆಯನ್ನು ತಮಗೆ

ಕಳುಹಿಸಿಕೊಟ್ಟಿದ್ದೇನೆ. ಅದರ ಹೆಡ್ಡಿಂಗ್ ಹೇಗೆ ಬರುತ್ತದೆ ಎಂದರೆ ಅಧ್ಯಕ್ಷರೆ, 33 ಪರ್ಸೆಂಟ್‌ಗೆ ಸ್ಥಗಿತಗೊಂಡ ಮಹಿಳಾ ರಾಜಕೀಯವನ್ನು ಹಿಡಿದು, ಅಧ್ಯಕ್ಷರೆ, ನಾನು ಇವೊತ್ತು ಹೇಳಬೇಕೆಂದರೆ ಈ ದೇಶದಲ್ಲಿ ಇರತಕ್ಕಂಥದ್ದು ಮಹಿಳಾ ಮತ್ತು ಮಹನೀಯರು ಎಂದು ಎರಡೇ ಜಾತಿ. ನನ್ನ ದೃಷ್ಟಿಯಲ್ಲಿ ಬೇರೆ ಬೇರೆ ಜಾತಿಗಳೇ ಇಲ್ಲ. 33 ಪರ್ಸೆಂಟ್ ಎಂದು ಹೇಳುವ ಪ್ರಶ್ನೆ ಅಲ್ಲ. ಮಹಿಳೆಯರ ಹಕ್ಕನ್ನು, 50 ಪರ್ಸೆಂಟ್‌ಗಿಂತ ಹೆಚ್ಚಿರತಕ್ಕಂಥ ಮಹಿಳೆಯರು ತಮ್ಮ ಹಕ್ಕನ್ನು ಕೇಳುತ್ತಾ ಇರತಕ್ಕಂಥ ಸಂದರ್ಭದಲ್ಲಿ "33 ಪರ್ಸೆಂಟ್‌ಗೆ ಸ್ಥಗಿತಗೊಂಡ ಮಹಿಳಾ ಶಾಸಕಿಯರು" ಎಂದು ಹೇಳಿ ನಾವು ಕೇವಲ ರಿಸರ್ವೇಷನ್‌ಗೋಸ್ಕರ ಬಂದಿದ್ದೇವೆ,, ಮತ್ತೆ ಯಾವುದಕ್ಕೂ ಬಂದಿಲ್ಲ, ಕೇವಲ ರಿಸರ್ವೇಷನ್ ತೆಗೆದುಕೊಂಡು ಫೈಟ್ ಮಾಡುವುದಕ್ಕೋಸ್ಕರ ರಾಜಕೀಯಕ್ಕೆ ಎಂಟ್ರಿ ಆಗುತ್ತಿದ್ದೇವೆ ಎಂದು ಹೇಳಿದರೆ ಅದು ನಿಜವಾಗಿಯೂ ಕೂಡ ಬಹಳ ದುಃಖಕರವಾದ ವಿಷಯ. ನಮಗೆ ಬೇಕಾಗಿರತಕ್ಕಂಥದ್ದು, ಇಡೀ ಸಮಾಜದಲ್ಲಿ ಮೇಲುನೋಟಕ್ಕೆ ಕಾಣತಕ್ಕಂಥ ಎಲ್ಲವನ್ನೂ ಸರಿಪಡಿಸಿ ಜನಗಳನ್ನು ಸರಿದಾರಿಯಲ್ಲಿ ತಂದು, ಸರಿಯಾದ ಶಾಸನಗಳನ್ನು ಈ ಶಾಸನಸಭೆಯ ಮುಖಾಂತರ ನಾವೂ ತಂದು, ಮಹಿಳೆಯರಿಗೆ ಆಗಿರತಕ್ಕ ಅನ್ಯಾಯಗಳನ್ನು ಸರಿಪಡಿಸಿ, ಅದಕ್ಕೆ ಸಂಬಂಧಪಟ್ಟ ಶಾಸನಗಳನ್ನು ತಂದು, ಮಕ್ಕಳಿಗೆ ಆಗಿರತಕ್ಕಂಥ ಅನ್ಯಾಯಗಳನ್ನು ಸರಿಪಡಿಸಿ ನಿಮ್ಮೊಡನೆ ನಾವೂ ಕೂಡ ಒಂದು ಗಾಡಿಯ ತೇರಿನ ಹಾಗೆ ಗಂಡು ಹೆಣ್ಣು ಎಂಬ ಬೇದಭಾವ ಇಲ್ಲದೆ ಇಬ್ಬರೂ ಸರಿಸಮಾನವಾಗಿ ನಡೆದಾಗ ಮಾತ್ರ ಈ ಸಮಾಜ ನಡೆಯುತ್ತದೆ ಎಂಬ ಏಕಮಾತ್ರ ದೃಷ್ಟಿಯಿಂದ ನಾವು ನಿಮ್ಮ ಜೊತೆ ಬಂದಿದ್ದೇವೆ. ಈ ಸಮಾಜದಲ್ಲಿ ಇದ್ದೇವೆ, ಈ ರಾಜಕೀಯಕ್ಕೆ ಬಂದಿದ್ದೇವೆ, ಮತ್ತು ಈ ಸಮಾಜದಲ್ಲಿ, ಈ ಸದನದಲ್ಲಿ ಕೆಲಸಮಾಡುತ್ತಾ ಬಂದಿದ್ದೇವೆ. ಆದರೆ ನಾವು ಕೆಲಸಮಾಡತಕ್ಕಂಥ ಸಂದರ್ಭದಲ್ಲಿ ನಾವು ಮಾಡತಕ್ಕಂಥ ಕೆಲಸಗಳಲ್ಲಿ ಎಲ್ಲಿಯಾದರೂ ಚ್ಯುತಿಯಾಗಿದ್ದರೆ, ನೀವು ಮಾಡತಕ್ಕಂಥದ್ದು ತಪ್ಪು, ಹೀಗೆ ಮಾಡಿದರೆ ಸರಿ ಎಂದು ಯಾರದಾದರೂ ಮಾರ್ಗದರ್ಶನ ನೀಡಿದರೆ ಅದಕ್ಕೆ ನಾವು ಒಪ್ಪುತ್ತೇವೆ. ಆದರೆ ಸರಿಯಾಗಿ ಹೋಗುತ್ತಾ ಇದ್ದರೂ ಸಹ, ನಾವು ಮಾಡತಕ್ಕಂಥ ಕೆಲಸಗಳು ಸರಿಯಾಗಿದ್ದರೂ ಸಹ ಅದನ್ನು ತಪ್ಪಾಗಿ, ಕಪ್ಪುಚುಕ್ಕೆಯಾಗಿ ಮಾರ್ಪಾಟು ಮಾಡಿ ಅದಕ್ಕೆ ಒಂದು ಬಣ್ಣ ಕಟ್ಟಿ ಪ್ರಕಟಣೆ ಮಾಡತಕ್ಕಂಥ ಸಂದರ್ಭದಲ್ಲಿ ನಾನು ದುಃಖದಿಂದ ಇವೊತ್ತು ಹಕ್ಕುಚ್ಯುತಿಯನ್ನು ತಮ್ಮ ಮುಂದೆ ತರುತ್ತಿದ್ದೇನೆ. ಅಧ್ಯಕ್ಷರೆ, ನನ್ನ ಬಗ್ಗೆ ನನಗೆ ಹೆದರಿಕೆ ಇಲ್ಲ, ನಾನು ಕಾನೂನಿನಲ್ಲಿ ಏನಾದರೂ ಸ್ಟೆಪ್ ತೆಗೆದುಕೊಳ್ಳಬಲ್ಲೆ, ಏನಾದರೂ ಮಾಡಬಲ್ಲೆ. ಆದರೆ ಇಡೀ ಅಸಂಖ್ಯಾತ ಮಹಿಳೆಯರು ರಾಜಕೀಯಕ್ಕೆ ಬರಬೇಕೆಂದು ತೊಳಲಾಡುತ್ತಿದ್ದಾರೆ. ಈಗಾಗಲೇ ಜಿಲ್ಲಾಪರಿಷತ್‌ನಲ್ಲಿ 30 ಪರ್ಸೆಂಟ್ ತಂದಿದ್ದೀರಿ, ಹಾಗೆಯೇ ಅವರುಗಳು ರಾಜಕೀಯದಲ್ಲಿ ಬಂದಿದ್ದಾರೆ, ಗ್ರಾಮಪಂಚಾಯಿತಿಯಲ್ಲಿ, ಜಿಲ್ಲಾಪಂಚಾಯಿತಿಯಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿ ಮಹಿಳೆಯರು ಕೆಲಸಮಾಡಿಕೊಂಡು ಬಂದಿದ್ದಾರೆ, ರಾಜಕೀಯಕ್ಕೆ ಕಾಲಿಟ್ಟಿದ್ದಾರೆ. ಈಗ ರಾಜ್ಯಸಭೆಯಲ್ಲಿ, ಲೋಕಸಭೆಯಲ್ಲಿ, ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್‌ನಲ್ಲೂ ಕೂಡ ರಾಜಕೀಯದಲ್ಲಿ ಮಹಿಳೆಯರು ಬರಬೇಕು ಎಂದು ಎಲ್ಲಾ ಸಮಾಜದವರು ಕೂಡ, ಎಲ್ಲಾ ರಾಜಕೀಯ ಪಕ್ಷದವರೂ ಕೂಡ ಆಗ್ರಹಪಡಿಸತಕ್ಕಂಥ ಈ ಸಂದರ್ಭದಲ್ಲಿ ಮಹಿಳಾ ಶಾಸಕಿಯರ ಬಗ್ಗೆ ಅವಮಾನಕರ ರೀತಿಯಲ್ಲಿ ಪಬ್ಲಿಕೇಷನ್ ಮಾಡಿಸಿದಾಗ ಮಹಿಳೆಯರು ಮುಂದೆ

ಬರುವುದಕ್ಕೆ ಎಷ್ಟು ಕಷ್ಟವಾಗುತ್ತದೆ ಎನ್ನತಕ್ಕಂಥ ದೃಶ್ಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಈ ಸಂದರ್ಭದಲ್ಲಿ ಈ ವಿಷಯವನ್ನು ಚರ್ಚೆ ಮಾಡುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇದ್ದರೆ, ಇದರ ಬಗ್ಗೆ ಗಮನಹರಿಸಿದರೆ, ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ಸನ್ಮಾನ್ಯ ಮುಖ್ಯಮಂತ್ರಿಗಳನ್ನು ದಯವಿಟ್ಟು ಸಭೆಗೆ ಕರೆಸಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೆ, ತಮಗೇ ಗೊತ್ತು. ನಾನೂ ಕೂಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷೆಯಾಗಿ ಹಲವಾರು ರಿಪೋರ್ಟ್‌ಗಳನ್ನು ತಮಗೆ ಕೊಟ್ಟೆ, ಈ ಸಭೆಯ ಮುಂದೆಯೂ ಸಹ ಇಟ್ಟೆ. ಅದರಲ್ಲಿ ಒಂದು, ಶ್ರೀಮತಿ ನಂದನಾರೆಡ್ಡಿಯವರ ಪ್ರಕರಣದ ಒಂದು ರಿಪೋರ್ಟನ್ನೂ ಕೂಡ ತಮ್ಮ ಮುಂದೆ ಕೊಟ್ಟೆ. ನಾನು ರಿಪೋರ್ಟನ್ನು ಕೊಟ್ಟಿದ್ದಷ್ಟೇ ಅಲ್ಲ, ಕೂಲಂಕುಷವಾಗಿ ವಿಚಾರ ಮಾಡಿ ನಮ್ಮ ಸಮಿತಿಯ ಸದಸ್ಯರೆಲ್ಲರ ಜೊತೆಯಲ್ಲಿ ಸೇರಿ ಒಂದು ರಿಪೋರ್ಟನ್ನು ಕೊಟ್ಟೆ. ನಾನು ಏನು ಕೇಳಿದೆ, ಬಹಳ ಅನ್ಯಾಯವಾಗಿದೆ, ಅಕ್ರಮವಾಗಿದೆ. ಅವರ ಮೇಲೆ ಸಿ.ಬಿ.ಐ. ತನಿಖೆ ಆಗಬೇಕು ಎಂದೂ ಕೂಡ ನಾನು ಕೇಳಿದೆ. ನಂತರ ಇದೇ ರೀತಿ ಪ್ರಕಟಣೆ ಮಾಡಿದಾಗ ತಮ್ಮ ಮುಂದೆ ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಾಗ, ಅದನ್ನು ತಾವೇ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದೀರಿ. ಆ ಪ್ರಿವಿಲೇಜ್ ಕಮಿಟಿ ಮುಂದೆ ಪೇಪರ್ಸ್ ಇದೆ. ಕಾರಣಾಂತರಗಳಿಂದ, ನಾನು ನಂದನಾರೆಡ್ಡಿಯವರ ಮೇಲೆ ಪ್ರಿವಿಲೇಜ್ ಕಮಿಟಿಗೆ ಕೊಟ್ಟಂಥ ಪತ್ರಿಕೆಯ ಪೇಪರ್ಸ್‌ಗಳೇ ಮಂಗಮಾಯವಾಯಿತು. ಪೇಪರ್ಸ್‌ಗಳೇ ಇರಲಿಲ್ಲ. ಕಮಿಟಿಯ ಮುಂದೆ ನನಗೆ ಸಾಕ್ಷಿ ಹೇಳುವುದಕ್ಕೆ ಕರೆದರು, ಪೇಪರ್ ಎಲ್ಲಿ ಹೋಯಿತು ಎಂದು ಕೇಳಬೇಕಾದಂಥ ಪ್ರಮೇಯ ಒದಗಿಬಂತು. ಆ ಸಂದರ್ಭದಲ್ಲಿ ನಾನು ನನ್ನಲ್ಲಿ ಇದ್ದಂಥ ಬೇರೆ ಕಾಪಿಯನ್ನು ಕೊಟ್ಟಾಯಿತು. ಮತ್ತೆ ನಂದನಾರೆಡ್ಡಿಯವರು ರಿಪ್ಲೈ ಕೊಟ್ಟಿದ್ದು ಪೇಪರ್‌ಗಳೇ ಇರಲಿಲ್ಲ, ಇಲ್ಲ ಎಂದು ಹೇಳಿದಳು. ಆ ಕಾಪಿಯನ್ನು ಕೂಡ ಕೊಟ್ಟಾಯಿತು. ಅದು ಪ್ರಿವಿಲೇಜ್ ಕಮಿಟಿಯ ಮ್ಯಾಟರ್‌ನಲ್ಲಿ ಇದೆ. ಆದರೆ ಈ ಪತ್ರಿಕೆಯವರು ಬರೆಯುತ್ತಾರೆ ನಂದನಾರೆಡ್ಡಿಯವರ ಜೊತೆಯಲ್ಲಿ ನಾನು ಶಾಮೀಲಾಗಿದ್ದೇನೆ ಎಂದು. ಸನ್ಮಾನ್ಯ ಅಧ್ಯಕ್ಷರೆ, ನಾನು ಸಮಿತಿಯ ಸದಸ್ಯಳಾಗಿ ರಿಪೋರ್ಟ್ ಕೊಟ್ಟು ಈ ಒಂದು ಹೋರಾಟ ಮಾಡಿಕೊಂಡು ಬಂದು ಸಿ.ಬಿ.ಐ. ತನಿಖೆ ಆಗಲಿ ಎಂದು ನಾನು ಕೇಳುತ್ತಿರತಕ್ಕಂಥ ಸಂದರ್ಭದಲ್ಲಿ ನನಗೆ ಬರೆಯುತ್ತಾರೆ, ನಾನು "ನಂದನಾರೆಡ್ಡಿಯವರ ಜೊತೆಯಲ್ಲಿ ಶಾಮೀಲಾಗಿದ್ದೇನೆ" ಎಂಬುದನ್ನು ಈ ಪತ್ರಿಕೆಯಲ್ಲಿ ಬರೆಯುತ್ತಾರೆ ಎಂದರೆ ಜನ ಏನೆನ್ನಬೇಕು? ನಾನು ರಿಪೋರ್ಟ್ ಕೊಡುವುದು ಒಂದು, ಮಾಡುವುದು ಒಂದು ಎಂದುಕೊಳ್ಳುವುದಿಲ್ಲವೇ? ಇದರಲ್ಲಿ ಬರೆದಿರುವಂತಹದನ್ನು ನಾನು ಓದುತ್ತೇನೆ. ನನ್ನ ಬಗ್ಗೆ ಬರೆಯತಕ್ಕಂಥ ಸಂದರ್ಭದಲ್ಲಿ "ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಷಯ ಸಮಿತಿಯ ಅಧ್ಯಕ್ಷೆಯಾಗಿ ಪ್ರಮೀಳಾ ಸಾಕಷ್ಟು ಸುದ್ದಿ ಮಾಡಿದ್ದಿದೆ. ಕೇಂದ್ರ ಕಾರಾಗೃಹದಲ್ಲಿ ಅನಧಿಕೃತ ಬಂಧನಕ್ಕೊಳಗಾಗಿದ್ದ ಮಹಿಳೆಯರ ಸಂಕಷ್ಟ, ವಿವಿಧ ಮಹಿಳಾ ಸ್ವಯಂ ಸೇವಾ ಸಂಸ್ಥೆಗಳಲ್ಲಿನ ಮಹಾನ್ ಭ್ರಷ್ಟಾಚಾರವನ್ನು ಬಯಲಿಗೆ ತಂದು ಹೆಸರು ಮಾಡಿದ ಪ್ರಮೀಳಾ ಅದೇಕೋ ಮೌನವಹಿಸಿ ಬಿಟ್ಟರು. ನಂದನಾರೆಡ್ಡಿ ಅವರ ಸ್ವಯಂಸೇವಾ ಸಂಸ್ಥೆಯೊಂದು

ನಡೆಸಿದ ಅವ್ಯವಹಾರಗಳ ಬಗ್ಗೆ ಪ್ರಮೀಳಾ ಸಮಿತಿ ಸ್ಪೀಕರ್ ರಮೇಶ್‌ಕುಮಾರ್ ಅವರಿಗೆ ಸಲ್ಲಿಸಿ ಕೆಲವು ತಿಂಗಳುಗಳೇ ಕಳೆದಿವೆ. ಆದರೆ ಈ ವರದಿ ಧೂಳು ತಿನ್ನುತ್ತಾ ಬಿದ್ದಿರುವುದರಲ್ಲಿ ಪ್ರಮೀಳಾ ಕೂಡ ಶಾಮೀಲಾಗಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ" ಎಂದು ಬರೆದಿದ್ದಾರೆ ಅಧ್ಯಕ್ಷರೆ, ನಾನು ತಮ್ಮನ್ನು ಕೇಳುತ್ತೇನೆ.... ಇಲ್ಲಿ ಬರೆದಿರುವುದೆಲ್ಲಾ ಓದುವುದಕ್ಕೆ, ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎಂದು.

ಅಧ್ಯಕ್ಷರು: ಅಲ್ಲೆ ಒಂದು ನಾಲ್ಕೈದು ಲೈನು ಮೇಲೆ ಎಲ್ಲೋ ಒಂದುಕಡೆಗೆ ನಾವೆಲ್ಲಾ ಬಹಳ ಮಾತನಾಡುತ್ತೇವೆ ಎಂದು, ಯಡಿಯೂರಪ್ಪನವರು, ನಂಜೇಗೌಡರು, ನಾನು, ವಾಟಾಳ್ ರವರು... ಅಲ್ಲೊಂದು ಕಡೆಗೆ, ಇಲ್ಲೊಂದು ಕಡೆಗೆ ಇಂಟರ್‌ವಿನ್ ಆಗುತ್ತೇನೆ ನಿಜ. ಆದರೆ ಅವರೆಲ್ಲಾ ಮಾತನಾಡಿದಷ್ಟು ನಾನು ಮಾತನಾಡಿಲ್ಲ, ಯಾರೋ ಅವರು ಈ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಮ್ಮ ಬಗ್ಗೆಯೂ ಕೂಡ ಕೊಟ್ಟಿದ್ದಾರೆ, ಅದನ್ನೂ ಓದುತ್ತೇನೆ "ವಿಧಾನಸಭೆಯಲ್ಲಿ ಅತಿ ಹೆಚ್ಚು ಮಾತಾಡಿ ಸಾಧನೆ ಮಾಡಿದವರ ಸಾಲಿನಲ್ಲಿ ಬಿಜೆಪಿ ಶಾಸಕಿ ಪ್ರಮೀಳಾ ನೇಸರ್ಗಿಯೂ ನಿಲ್ಲುತ್ತಾರೆ. ಹೀಗಿದ್ದರೂ ಸ್ಪೀಕರ್ ರಮೇಶ್ ಕುಮಾರ್, ಶಾಸಕರಾದ ನಂಜೇಗೌಡ, ವಾಟಾಳ್ ನಾಗರಾಜ್, ಯಡಿಯೂರಪ್ಪ, ಮಲ್ಲಿಕಾರ್ಜುನ ಖರ್ಗೆಯ ನಂತರದ ಸ್ಥಾನವಷ್ಟೇ ಪ್ರಮೀಳಾಗೆ" ನನಗೆ ಯಾವೊತ್ತು ಹಾಗೆ ಅನಿಸಿಲ್ಲ.

MR. SPEAKER : He is ridiculing all of us and you. ಪಾಪ ಅವರ ಗೈಡೆನ್ಸ್ ಇದ್ದರೆ ನಾವೆಲ್ಲಾ ಹೋಗಿ ತೆಗೆದುಕೊಳ್ಳುತ್ತೇವೆ. ಇನ್ನು ಮೇಲೆ ಹೇಗೆ ಮಾತನಾಡಬೇಕೆಂದು, ಇರಲಿ. ನನಗೂ ಅನುಭವ ಇಲ್ಲ ಎನು ಮಾಡುವುದು; ನನಗೆ ತಿಳುವಳಿಕೆ ಕೊಡುವವರು ಇದ್ದಾರಲ್ಲಾ ಅದೇ ಒಂದು ಸಂತೋಷ, ಈ 50ನೇ ವರ್ಷದ ಸ್ವಾತಂತ್ರೋತ್ಸವದಲ್ಲಿ ಇದೊಂದು ಖುಷಿ ನನಗೆ, ತಾವು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ಪತ್ರಿಕೋದ್ಯಮದಲ್ಲಿ ಅವರಿಗೆ ಸಾಕಷ್ಟು ಅನುಭವ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಆರ್ಟಿಕಲ್ 19ರಲ್ಲಿ ಅವರಿಗೆ 'ವಾಕ್ ಸ್ವಾತಂತ್ರ್ಯದ' ಅಧಿಕಾರವನ್ನು ಕೊಟ್ಟಿದ್ದಾರೆ. ಆದರೆ ಅದರ ಜೊತೆಯಲ್ಲಿ ಆರ್ಟಿಕಲ್ 51ಎ ಕೂಡ ಇವೊತ್ತು ಪತ್ರಿಕಾ ಕೌನ್ಸಿಲ್ ಬಗ್ಗೆ ಸುಪ್ರಿಂಕೋರ್ಟ್ ತೀರ್ಮಾನ ಮಾಡುವಾಗ ಮಹಿಳೆಯರ ಬಗ್ಗೆ ಅವಮಾನಕರವಾದಂಥ ಡಿರೋಗೇಟರಿ ಸ್ಟೇಟ್‌ಮೆಂಟ್ ಮಾಡತಕ್ಕಂಥದ್ದು ಅಲ್ಲ ಎನ್ನತಕ್ಕಂಥದ್ದನ್ನೂ ಕೂಡ ಇವೊತ್ತು ಸುಪ್ರೀಂ ಕೋರ್ಟ್ ರೆಕಗ್ನೈಸ್ ಮಾಡಿದೆ. ಇದನ್ನು ಏತಕ್ಕೋಸ್ಕರ ಗಮನಕ್ಕೆ ತರುತ್ತಿದ್ದೇನೆ ಎಂದರೆ ನನಗೆ ಪತ್ರಿಕೆಯನ್ನು ಪ್ರಿಂಟ್ ಮಾಡುವುದಕ್ಕೆ ಹಕ್ಕಿದೆ, ಮಾಡಬಹುದು, ನಾನು ಏನುಬೇಕಾದರೂ ಪ್ರಿಂಟ್ ಮಾಡಬಹುದು, ಜೇರ್ಣ ಮಾಡಿಕೊಳ್ಳಬಹುದು ಎನ್ನುವುದಾದರೆ ನಾವು ಈ ಒಂದು ಪತ್ರಿಕಾ ಹತೋಟಿಯನ್ನು ಇಟ್ಟುಕೊಳ್ಳಿ ಎಂದು ಹೇಳುತ್ತಾ ಇಲ್ಲ, ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡಿ ಎಂದು ಹೇಳುತ್ತಾ ಇಲ್ಲ, ಆದರೆ ಅವರು ಪತ್ರಿಕೆಯಲ್ಲಿ ಏನು ಪ್ರಕಟಣೆ ಮಾಡುತ್ತಾರೆ ಅದು ಸರಿಯಾಗಿದೆಯೆ, ಇಲ್ಲವೇ ಅವರ ಹಕ್ಕುಬಾಧ್ಯತೆಗೆ ಸರಿಯಾಗಿ ಇದೆಯೋ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ಅಕ್ಷರ ಇದೆ ಅಧ್ಯಕ್ಷರೆ, ಇಲ್ಲಿ ಹೇಳುತ್ತಾರೆ, "ವೃತ್ತಿಯಿಂದ ವಕೀಲರಾಗಿರುವ

ಪ್ರಮೀಳಾಗೆ ಅನೇಕ ಮಂತ್ರಿಗಳು, ಶಾಸಕರು ಕ್ಲೈಂಟ್‌ಗಳಾಗಿದ್ದಾರೆ. ಸ್ವಲ್ಪ ಸಮಯ ಸ್ಪೀಕರ್ ರಮೇಶ್‌ಕುಮಾರ್‌ರ ಪ್ರೋತ್ಸಾಹ ಗಿಟ್ಟಿಸಿದ ಪ್ರಮೀಳಾ ಈಗ ಅದರಿಂದಲೂ ವಂಚಿತರಾದಂತೆ ಕಾಣುತ್ತಿದ್ದಾರೆ" ಇದು ನನಗೆ ಬಹಳ ದುಃಖವಾಗುತ್ತದೆ. ಇದರ ಪ್ರತಿಯೊಂದು ಅಕ್ಷರವನ್ನು ಒಂದೊಂದು ವಾಕ್ಯವನ್ನು ತೆಗೆದುಕೊಂಡು ಹೋಯಿತು ಎಂದರೆ ಪ್ರತಿಯೊಂದು ವಾಕ್ಯದಲ್ಲೂ ಹೀಗೆಯೇ ಅದು ಹಿಂದೆ ಒಂದು ತರಹ. "ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಕೇವಲ ವ್ಯಾಪಾರಿ ಮನೋಧರ್ಮದಿಂದ ದುರ್ಬಲರನ್ನು ದೂರವಿಟ್ಟಿದ್ದಾರೆ". ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನಂದರೆ ಇದು ಏನು ವ್ಯಾಪಾರಿ ಮನೋಧರ್ಮ ಎಂದು ಯಾವ ಭಾಷೆಯಲ್ಲಿ ಇದನ್ನು ಹೇಳುತ್ತಿದ್ದಾರೆ. ಇದನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇಲ್ಲಿ ಪ್ರತಿಯೊಂದು ಅಕ್ಷರವೂ ಕೂಡ ಇದರಲ್ಲಿ ನನ್ನ ಬಗ್ಗೆ ಇಷ್ಟಾದರೆ ಇಲ್ಲಿರತಕ್ಕಂಥ ಶಾಸಕರ ಮೇಲೆ ಅದರಲ್ಲೂ ಮಹಿಳಾ ಶಾಸಕರುಗಳ ಮೇಲೆ ಮಹಿಳಾ ಮಂತ್ರಿಗಳಾಗಿದ್ದು ತಪ್ಪಾ? ಮಹಿಳಾ ಮಂತ್ರಿಗಳಾಗಿ ನಾವು ಕೆಲಸ ಮಾಡುವುದು ತಪ್ಪಾ? ಇವರು ಎಂತಹ ವಿಷಯಗಳನ್ನು ಬರೆದಿದ್ದಾರೆಂದರೆ ನಾನು ಹೇಳುವುದಿದೆ. ನಮ್ಮ ಎಲ್ಲಾ ಸದಸ್ಯರುಗಳು ಇವತ್ತು ನಮ್ಮ ಜೊತೆಯಲ್ಲಿ ಸೇರಿದ್ದಾರೆ. ಅವರೂ ಕೂಡ ಇದರ ಬಗ್ಗೆ ತಮ್ಮ ಗಮನಹರಿಸುವುದಕ್ಕೆ ಮುಂದಿಟ್ಟಿದ್ದಾರೆ. ಇದರಲ್ಲಿ ಮಹಿಳಾ ಮಂತ್ರಿಗಳಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರ ಬಗ್ಗೆ ಮತ್ತು ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್‌ರವರ ಬಗ್ಗೆ ಶ್ರೀಮತಿ ರಾಣಿ ಸತೀಶ್‌ರವರ ಬಗ್ಗೆ ಮತ್ತು ಶ್ರೀಮತಿ ಮನೋರಮ ಮಧ್ವರಾಜ್ ಬಗ್ಗೆ, ಶ್ರೀಮತಿ ಸುಮಾವಸಂತ್ ಮಾರ್ಗರೇಟ್ ಆಳ್ವರವರ ಬಗ್ಗೆ ಎಲ್ಲಾ ಮಹಿಳೆಯರ ಮೇಲೂ ಬರೆದಿದ್ದಾರೆ. ಈ ಬಗ್ಗೆ ನನಗೆ ಎಷ್ಟು ದುಃಖವಾಗುತ್ತದೆಂದರೆ ಮಹಿಳೆಯರು ರಾಜಕೀಯಕ್ಕೆ ಬರುವುದು ಬೇಡವೇ? ಈ ಉದ್ದೇಶವೇನಾದರೂ ಇದೆಯೇ, ಎಂಬುದನ್ನು ನಾವು ಇವತ್ತು ನೋಡಬೇಕಾಗಿದೆ. ಶ್ರೀಮತಿ ವಿಮಲಬಾಯಿ ದೇಶ್‌ಮುಖ್ ರವರ ಬಗ್ಗೆ ನನಗೆ ಬಹಳ ದುಃಖವಾಗುತ್ತಿದೆ, ಇದರ ಬಗ್ಗೆ ಸದನಕ್ಕೆ ಬರುವಾಗ ನಾನು ಮಾತನಾಡಬೇಕಾ, ಬೇಡವಾ ಎಂದು ನನಗೆ ಈ ವಿಷಯವಾಗಿ ಬಾಯಿ ಕಟ್ಟುತ್ತದೆ. ಉಪನಿಷತ್ತುನಲ್ಲಿ "ಯಕ್ತರಕ್ಷರಂ ಅಧನಮೇದೆ" ಎಂದು ಬರುತ್ತದೆ, ಅಂದರೆ ಮಾತನಾಡುವುದಕ್ಕೆ ಆಗುವುದಿಲ್ಲ. ಹಾಗೆ ಈ ವಿಷಯದಲ್ಲೂ ಕೂಡ ನನಗೆ ಮಾತನಾಡುವುದಕ್ಕೆ ಗಂಟಲು ಕಟ್ಟಿ ಬರುತ್ತಿದೆ. ನಮ್ಮ ಹಿರಿಯ ನಾಯಕಿಯಾದ ಶ್ರೀಮತಿ ವಿಮಲಬಾಯಿ ದೇಶ್‌ಮುಖ್‌ರವರ ಬಗ್ಗೆ ಹೀಗೆ ಬರೆದಿದ್ದಾರೆ. "ಶ್ರೀಮತಿ ವಿಮಲಬಾಯಿಯವರ ಇನ್ನೊಂದು ಮುಖ", ತಲೆಯ ಮೇಲೆ ಸೆರಗನ್ನು ಹಾಕಿಕೊಂಡು ಯಾವುದರಲ್ಲೂ ಆಸಕ್ತಿ ಇಲ್ಲದಂತೆ, ಯಾವುದರ ಅರಿವು ಇಲ್ಲದಂತೆ ಓಡಾಡುವ ವಿಮಲಬಾಯಿಯನ್ನು ಮೊಟ್ಟ ಮೊದಲ ಬಾರಿಗೆ ನೋಡುವವರು ಆಕೆಯನ್ನು ಮುಗ್ದೆ ಎಂದು ನಂಬಿಬಿಡುವ ಅಪಾಯವಿದೆ".

ಅಧ್ಯಕ್ಷರು : ಹೋಗಲಿ ಬಿಡಿ, ಅದನ್ನು ಏಕೆ ಓದುವುದಕ್ಕೆ ಹೋಗುತ್ತೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಇನ್ನು ಮುಂದಿನದನ್ನು ಓದುವುದಕ್ಕೆ ಇಷ್ಟ ಪಡುವುದಿಲ್ಲ.

ಅಧ್ಯಕ್ಷರು : ಬೇಡ, ಅದನ್ನು ಓದಬೇಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ನನಗೆ ಇದನ್ನು ಓದುವುದಕ್ಕೆ ಇಷ್ಟವಾಗುತ್ತಿಲ್ಲ. ಇದರಲ್ಲಿ ಬರೆದಿರುವುದನ್ನು ನೋಡಿ ನನಗೆ ಬಹಳ ದುಃಖವಾಗುತ್ತದೆ. ಇಲ್ಲಿ ಶ್ರೀಮತಿ ವಿಮಲಬಾಯಿ ದೇಶ್‌ಮುಖ್‌ರವರ ಬಗ್ಗೆ, ಶ್ರೀಮತಿ ಹೇಮಾವತಿಯವರ ಬಗ್ಗೆ, ಶ್ರೀಮತಿ ವಿಜಯಲಕ್ಷ್ಮಿಬಂಡಿಸಿದ್ದೇಗೌಡರ ಬಗ್ಗೆ, ಶ್ರೀಮತಿ ಜ್ಯೋತಿರೆಡ್ಡಿಯವರ ಬಗ್ಗೆ ಮತ್ತು ಶ್ರೀಮತಿ ರಾಣಿ ಸತೀಶ್‌ರವರ ಬಗ್ಗೆ, ಇದರಲ್ಲಿ ಒಬ್ಬರೇ ಅಲ್ಲ. ನಾವು ಏನು ಮಹಿಳೆಯಾಗಿ ಕೆಲಸವನ್ನು ಮಾಡಬಾರದೇ ? ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕದಲ್ಲೂ ಕೂಡ ಒಂದು ಪ್ರೆಸ್ ಕೌನ್ಸಿಲ್ ಮಾಡುತ್ತೇನೆಂದು ಹೇಳಿದ್ದರು. ನನಗೆ ಮಾಡಬೇಕೆಂದು ಮನಸ್ಸಿನಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಇದಕ್ಕೆ ಈಗ ಸದವಕಾಶವಾಗಿದೆ. ಈಗ ಕರ್ನಾಟಕ ಪ್ರೆಸ್ ಕೌನ್ಸಿಲ್ ಮಾಡುವುದಕ್ಕೆ ಅವಕಾಶ ಬಂದಿದೆ, ಇಲ್ಲದಿದ್ದರೆ ನಮಗೆ ನ್ಯಾಯ ಸಿಗುವುದಿಲ್ಲ. ಈಗ ನಾವೆಲ್ಲಾ ಮಹಿಳೆಯರು ಕೋರ್ಟಿಗೆ ಹೋಗಿ ಕಂಪ್ಲೇಂಟ್ ಕೊಟ್ಟು ಡಿಫಮೇಷನ್ ಹಾಕಿದರೆ ನಮಗೆ ಮಾನಹಾನಿಯಾಗಿದೆ, ನಮಗೆ ಆಗಿರುವಂತಹ ಮಾನನಷ್ಟವನ್ನು ಕೊಡಿ ಎಂದು ನಾವು ಇವರ ಮೇಲೆ ಕಂಪ್ಲೇಂಟ್ ಕೊಟ್ಟು ಸರಿ ಎನ್ನಿಸುವುದಕ್ಕೆ ಆಗುತ್ತದೆಯೇ ? ನನಗನ್ನಿಸುವುದೇನೆಂದರೆ ಯಾರು ಈ ಆರ್ಟಿಕಲ್ ಅನ್ನು ಬರೆದಿದ್ದಾರೆ, ಇದರ ಪಬ್ಲಿಷರ್ ಆಥರ್ ಮತ್ತು ಪ್ರಿಂಟರ್ ಯಾರು ಇದ್ದಾರೆ. ಈ ಮೂವರು ಸೆಕ್ಷನ್ 499ರಲ್ಲಿ ಜವಾಬ್ದಾರರಾಗುತ್ತಾರೆ. ಆದುದರಿಂದ ದಯಮಾಡಿ ಈ ಮೂರು ಜನರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. Section 499 of IPC deals with defamation. ಅದಾದ ಮೇಲೆ ನಾನು ತಮ್ಮ ಗಮನಕ್ಕೆ ತರುವುದೆಂದರೆ ಆರ್ಟಿಕಲ್ 51(ಎ) ಫಂಡಮೆಂಟಲ್ ಡ್ಯೂಟಿಸ್ ರೈಟ್ಸ್ ಜೊತೆಗೆ fundamental duties has been recognised by the constitution. ಮೂಲಭೂತ ಹಕ್ಕು ಎಂದು ಮಾತ್ರ ಇತ್ತು. ಆದರೆ ಈಗ ಫಂಡಮೆಂಟಲ್ ಡ್ಯೂಟಿಸ್ ಮೂಲಭೂತ ಕರ್ತವ್ಯಗಳು ಅದರಲ್ಲೂ ಕೂಡ Article 51A - derogatory statements made, it is recognisable and enforceable. ಈಗಾಗಲೇ ಸುಪ್ರೀಂ ಕೋರ್ಟ್ ರೂಲಿಂಗ್ ಕೊಟ್ಟಿದೆ. ಆದುದರಿಂದ ಮೂಲಭೂತ ಹಕ್ಕುಗಳ ಜೊತೆಗೆ, ಮೂಲಭೂತ ಕರ್ತವ್ಯವನ್ನು ಚ್ಯುತಿ ಮಾಡಿದಾಗ ಅವರು ಅಕೌಂಟಬಲ್ ಆಗುತ್ತಾರೆ. ಕಾನೂನು ಪ್ರಕಾರವಾಗಿ ಸುಪ್ರೀಂ ಕೋರ್ಟ್‌ನ ರೂಲಿಂಗ್ ಪ್ರಕಾರವಾಗಿ ಇದೂ ಕೂಡ ರೆಕಗ್‌ನೈಸ್ ಆಗಿದೆ. ಆದುದರಿಂದ ಎರಡನ್ನು ಗಮನಿಸಿ ಆರ್ಟಿಕಲ್ 19ರಲ್ಲಿ ನನಗೆ ಮಾತನಾಡುವ ಹಕ್ಕಿದೆ ಎಂದು ಮತ್ತು ಮನಬಂದಂತೆ ಬರೆಯಬಹುದೆಂದು ಮಾಡುವುದಕ್ಕಾಗುವುದಿಲ್ಲ. It must be only reasonable.ಅವರು ಬಾಯಿಗೆ ಬಂದಹಾಗೆ ಬರೆಯುವುದಕ್ಕಾಗುವುದಿಲ್ಲ. If any criticism is to be made, it must be legitimate. ಈಗ ಏನಾಗಿದೆ ಎಂದರೆ ಯಾರುಬೇಕಾದರೂ ಮಹಿಳೆಯರ ಬಗ್ಗೆ ಏನು ಬೇಕಾದರೂ ಬರೆಯಬಹುದು. ಪೋಲೀಸ್‌ನವರಿಗೆ ಹೇಳಿದರೆ, ಹೌದಾ, ಹಾಗಾದರೆ ಒಂದು ಕಂಪ್ಲೇಂಟ್ ಕೊಡಿ ಎಂದು ಹೇಳುತ್ತಾರೆ. ಈ ರೀತಿ ಕಂಪ್ಲೇಂಟ್ ಕೊಟ್ಟು ಹತ್ತು ವರ್ಷಗಳು ನಮಗೆ ಅಲೆಯುವುದಕ್ಕೆ ಸಾಧ್ಯವಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಸಂದರ್ಭವನ್ನೇ ಉಪಯೋಗಿಸಿಕೊಂಡು it must be treated as a cognisable offence. Any publication, any derogatory statement condemning the dignity of women

ಎನ್ನುವಂಥ ಪ್ರಸಂಗ ಬಂದಾಗ ಅಂತಹ ಸ್ಟೇಟ್‌ಮೆಂಟ್ ಬಗ್ಗೆ ಯಾರಾದರೂ ಹೇಳಿದಾಗ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದಾಗ ಮತ್ತು ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಪ್ರಕಟಣೆ ಮಾಡಿದಾಗ ಕಾಗ್ನಿಸಬಲ್ ಅಫೆನ್ಸ್ ಮಾಡದೇ ಇದ್ದರೆ ಮಹಿಳೆಯರಿಗೆ ಉಳಿಗಾಲವಿಲ್ಲ. ಮಹಿಳೆಯರು ಮಾನದಿಂದ, ಮರ್ಯಾದೆಯಿಂದ ಜೀವನವನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಎರಡನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ನಾನು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಇದನ್ನು ಮಾಡದೇ ಇದ್ದರೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕಿಚ್ಛಿಸುತ್ತೇನೆ. ಇಂತಹ ಸಂದರ್ಭದಲ್ಲಿ prevention of disorder and public order ಬಗ್ಗೆ ಕೂಡ ತಾವು ಗಮನಹರಿಸಬೇಕಾಗುತ್ತದೆ. The Supreme Court in Rammanohar Vs the State of Bihar has observed: "Public order which ought to be safeguarded entails the prevention of disorder of grave nature". Further, ``public order is an aggravated form of disturbance of public peace. It affects the general current of public life."

Narayan Das Vs the State of Madhya Pradesh - 1974 Supreme Court : "It is our firm belief nay a conviction which constitutes one of the basic values of the free society to which we are wedded under our constitution, but there must be freedom not only for the thought that we cherish but also for the thought that we hate". The Supreme Court has recognised Arkad Cox ಆರ್ಕಿಡಾಗ್ ಕಾಕ್ಸ್ ಎನ್ನತಕ್ಕಂಥವರು ಫಸ್ಟ್ ಅಮೆಂಡ್‌ಮೆಂಟ್‌ನಲ್ಲಿ ಅಮೇರಿಕನ್ ಕಾನ್ಸಿಟ್ಯೂಷನ್‌ನಲ್ಲಿ ಇದೇ ವಿಷಯ ಬಂದಾಗ ಅವರು ಒಂದು ಮಾತನ್ನು ಹೇಳುತ್ತಾರೆ. "The judgment that the risks of supression are greater than harm done by bad idea rests upon the faith in the ultimate good sense and decency of the people".

MR. SPEAKER : I have a small suggestion. You specify one instance which amounts to breach of privilege. In the article different instances which clearly amount to breach of privilege may be illustrated in brief. Then, you can substantiate your defence by quoting all these things to strengthen your case.

SRI KAGODU THIMMAPPA : If there is a prima-facie case of grave breach of privilege, the House itself can take congisance of the issue.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ರವರ ಬಗ್ಗೆ ತತ್ವ, ಸಿದ್ಧಾಂತ, ಆದರ್ಶಗಳಿಲ್ಲದೆ ಯಾರದೋ ಕೃಪೆಯಿಂದ ಇನ್ನಾರದೋ ಲಾಭಕ್ಕಾಗಿ ಶಾಸಕರಾಗಿ, ಮಂತ್ರಿಗಳಾಗಿರುವ ಮಹಿಳೆಯರಿಂದ ಮಹತ್ವದ್ದನ್ನು ನಿರೀಕ್ಷಿಸುವುದು ಎಷ್ಟು ಸರಿ,

ಸಾಮರ್ಥ್ಯ ಮತ್ತು ಪ್ರತಿಭೆ ಇಲ್ಲದೇ ಒದ್ದಾಡುತ್ತಿರುವ ಜನತಾ ದಳದ ಶಾಸಕಿಯರಲ್ಲಿ ಸಾಮರ್ಥ್ಯ ಮತ್ತು ಪ್ರತಿಭೆ ಇಲ್ಲದೇ ಅಂದರೆ ಯಾರಿಗೂ ಪ್ರತಿಭೆ, ಸಾಮರ್ಥ್ಯ ಇಲ್ಲ. ಜನತಾದಳದ ಶಾಸಕಿಯರಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾಗುವಲ್ಲಿ ಯಾರೂ ಸಫಲರಾಗಲಿಲ್ಲ. ಹಾಗೂ ಹೀಗೂ ಮಹಿಳಾ ರಾಜಕಾರಣದಲ್ಲಿ ಇರುವುದರಲ್ಲೆ ಉನ್ನತ ಸ್ಥಾನ ಪಡೆದಂತೆ ಕಾಣುತ್ತಿರುವ ವ್ಯಕ್ತಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಪ್ರತಿಗಾಮಿ ಧೋರಣೆಗೆ ಪಕ್ಕಾ ಪ್ರತಿನಿಧಿಯಂತಿರುವ ಈಕೆ ಕರ್ನಾಟಕ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವೆಯಾಗಿದ್ದಾರೆ.

11.50 ಎ.ಎಂ.

ಇವರಿಗೆ ಏನೂ ಇಲ್ಲ. ಅಂದರೆ, ಅದರ ಆಳವನ್ನು ತಾವು ಗಂಭೀರವಾಗಿ ಯೋಚನೆ ಮಾಡಬೇಕು.

ಅಧ್ಯಕ್ಷರು : ನಾನು ನಿಮಗೆ ಇನ್ನೂ ಹೆಚ್ಚು ಅವಕಾಶವನ್ನು ಕೊಡುತ್ತೇನೆ. Character assassination is different. Breach of privilege of members is different. You may illustrate such instances that are mentioned in the article which amount to breach of privilege of members for their effective discharge of duties as legislators. I mean it to strengthen your case. Let there be clarity. You should be very dispassionate.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ಹೇಳುತ್ತೇನೆ, ಕನ್ನಡ ಭಾಷೆ ಮಾತ್ರ ಅಲ್ಲದ, ಹಾಳ ಅಗಲುವು ಗೊತ್ತಿಲ್ಲದ, ಸಂಸ್ಕೃತಿ ಅರವೂ ಇಲ್ಲದ ಲೀಲಾದೇವಿ, ಮುಂದಿನ ಪದ, ತನ್ನ ಲೀಲೆಗಳಿಂದಾಗಿ ಈ ಇಲಾಖೆಯನ್ನು ಕಸ ಇಲಾಖೆಯನ್ನಾಗಿ ಪರಿವರ್ತಿಸಿಬಿಟ್ಟಿದ್ದಾರೆ. ಖಾಸಗಿಯಾಗಿ ಮಾತನಾಡುವಾಗಿ ಪಟೇಲರ ಚೇಷ್ಟೆಗಳ ಬಗ್ಗೆ ನೂರಾರು ಕಥೆಗಳನ್ನು ಹೇಳಿ, ಗೆಳೆಯರನ್ನು, ಕೆಲವು ಪತ್ರಕರ್ತರನ್ನು ರಂಜಿಸುವ ಈಕೆಯ ಸಾಧನೆ ಸೊನ್ನೆ ಮಾತ್ರವಲ್ಲ ಅದಕ್ಕೂ ಕಡಿಮೆ. ಇದನ್ನು ಓದುವಾಗ ಇನ್ನ್ಯೆನೆಂಡೋ ಎಂದು ಡಿಫಮೇಷನ್‌ನಲ್ಲಿ ಹೇಳುತ್ತಾರೆ. ಆ ಪದಗಳ ಹಿಂದೆ ಇರತಕ್ಕಂಥದ್ದನ್ನು ನಾವು ಗಮನಿಸಬೇಕಾಗಿದೆ, ಲೇಖಕರನ್ನು ಯಂತ್ರಗಳೆಂದು ಭಾವಿಸಿರುವ ಲೀಲಾದೇವಿ...

MR. SPEAKER : I wish to make it clear to the Hon. member once again, defamation is a matter to be looked into by a different forum. We are seized of privilege issue. Wherever the privilege of the hon. members of this House is affected, I come into the picture. You can have more time, but you can kindly go through these things and mention specific instances. One thing you have made. Yes, I have heard you. Further more, ಎಲ್ಲಿ ನಿಮ್ಮ ಕರ್ತವ್ಯ ನಿರ್ವಹಣೆಯ ಮೇಲೆ ಪರಿಣಾಮವಾಗುತ್ತದೆ ಎನ್ನುವುದನ್ನು ಹೇಳಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಸೊನ್ನೆ ಮಾತ್ರವಲ್ಲ, ಅದಕ್ಕಿಂತಲೂ ಕಡಿಮೆ ಎಂದು ಹೇಳಿದರು, ಸೊನ್ನೆಯ ಬಗ್ಗೆ ಮೌಲ್ಯವೇ ಗೊತ್ತಿಲ್ಲವೆಂದು ಅರ್ಥವಾಯಿತು. Without "zero" there

is no figure. ಸೊನ್ನೆಯನ್ನು ಒಂದಕ್ಕೆ ಸೇರಿಸಬೇಕು, ಹತ್ತು ಆಗುತ್ತದೆ ಹತ್ತಕ್ಕೆ ಸೊನ್ನೆ ಸೇರಿಸಿದರೆ ನೂರಾಗುತ್ತದೆ, ನೂರಕ್ಕೆ ಸೊನ್ನೆ ಸೇರಿಸಿದರೆ ಸಾವಿರವಾಗುತ್ತದೆ, Without zero there is no figure. ಸೊನ್ನೆಗೆ ಬೆಲೆ ಇಲ್ಲವೆಂದರೆ ನೀವೇ ಅರ್ಥ ಮಾಡಿಕೊಳ್ಳಬೇಕು.

MR. SPEAKER : Thank you for the advice. Madam, you have time. I am only trying to put you straight to track.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ಇದೇ ಸಂದರ್ಭದಲ್ಲಿ ಇಲ್ಲಿ ಧರ್ಮಕಾರಣದ ಬಗ್ಗೆಯೂ ಇಲ್ಲಿ ಚರ್ಚೆಗೆ ಬಂತು. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರ ಬಗ್ಗೆ, "ಧರ್ಮಕಾರಣ ಎಂಬ ಕೃತಿಯನ್ನು ನಿಷೇದಿಸಿದ ಸಂದರ್ಭದಲ್ಲಿ ನಡೆದ ಪ್ರತಿಭಟನೆ, ಚಳವಳಿಗಳ ಸಂದರ್ಭದಲ್ಲಿ ಸಾಹಿತಿಗಳನ್ನು ಹೀನಾಯವಾಗಿ ನಡೆಸಿಕೊಂಡ ಖ್ಯಾತಿಯೂ ಲೀಲಾದೇವಿಗಿದೆ. ಕರ್ನಾಟಕ ಸಾಹಿತ್ಯ ಆಕಾಡೆಮಿ ಒಂದು ಸ್ವಾಯತ್ತ ಸಂಸ್ಥೆ (ಸರ್ಕಾರದ ನೆರವಿದ್ದರೂ) ಎಂಬ ಅರಿವಿದ್ದೂ "ಧರ್ಮಕಾರಣ"ಕ್ಕೆ ಪ್ರಶಸ್ತಿ ಕೊಡಕೂಡದೆಂದು ಆಕಾಡಮಿಗೆ ಕಟ್ಟಪ್ಪಣೆ ಹೊರಡಿಸಿದ್ದ ಲೀಲಾದೇವಿ ಸರ್ವಾಧಿಕಾರಿಯಂತೆ ಭ್ರಮಿಸಿ ರಾಜಕೀಯ ಜೀವನದಲ್ಲಿ ವಿಫಲರಾಗಿರುವುದು ಇತಿಹಾಸದಲ್ಲಿ ಈಗಾಗಲೇ ದಾಖಲಾಗಿದೆ" ಎಂದ ಬರೆಯಲಾಗಿದೆ. ಅವರು ಕಾನೂನಿನ ಅಡಿಯಲ್ಲಿ ಮಂತ್ರಿಯಾಗಿ ಅವರು ತಮ್ಮ ಕರ್ತವ್ಯವನ್ನು ಮಾಡಿದರು, ಅಧ್ಯಕ್ಷರೆ ಇದು ಹೀಗಿದೆ? ಮುಂದೆ, ತುಂಬಾ ಸಂಪನ್ನೆಯಂತೆ ಸಚ್ಚಾರಿತ್ರೆವಂತೆಯಂತೆ ಮಾತನಾಡುವ ಲೀಲಾದೇವಿಯನ್ನು ಈವರೆಗಿನ ಮಾತುಗಳೆಲ್ಲಾ ಜೊಳ್ಳಿನಂತೆ ಗಾಳಿಯಲ್ಲಿ ತೂರಿಹೋಗಿವೆ. ಹುಟ್ಟಿನಿಂದ ಶರಣೆಯಾದರೂ ಶಕ್ತರಾಜಕಾರಣಿಗಳಿಗೆ ಮಾತ್ರ ಶರಣಾಗಿರುವ ಲೀಲಾದೇವಿಯವರ ಜಾಣತನ ಅವರನ್ನು ಇಲ್ಲಿಯವರೆವಿಗೂ ತಂದು ನಿಲ್ಲಿಸಿದೆ. ಈವರೆಗೂ ಯಾವ ವಿಶೇಷ ಸಾಧನೆಯನ್ನು ಮಾಡಿರದಿದ್ದರೂ ತನ್ನನ್ನು ಕ್ಯಾಬಿನೆಟ್ ಮಂತ್ರಿಯಾಗಿಸಿದ್ದಕ್ಕೆ ಪಟೇಲರ ಮೇಲೆ ಅಪಾರ ಸಿಟ್ಟು, ಅಕ್ರೋಶವನ್ನು ಗುಟ್ಟಾಗಿ ವ್ಯಕ್ತಪಡಿಸುತ್ತಲೇ ಇದ್ದಾರೆ. ಈಕೆಯ ಕುಟುಂಬದ ಸದಸ್ಯರ ವರ್ಗಾ ವ್ಯವಹಾರವಂತೂ ಯಾವುದೇ ಅಡ್ಡಿ ಆತಂಕ ಇಲ್ಲದೆ ನಡೆಯುತ್ತಿದೆ. ತಾವು ನಿರ್ದಿಷ್ಟವಾದ ವಾಕ್ಯವನ್ನು ಹೇಳಿ ಎಂದು ಹೇಳಿದಿರಿ. ಈ ವಿಷಯಗಳು ಬಂದಾಗ ಸುಪ್ರೀಂ ಕೋರ್ಟ್ ಏನು ಹೇಳಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದು ಹೇಳುತ್ತಿದ್ದೇನೆ ಒಂದೊಂದೇ ವಾಕ್ಯವನ್ನು ಅಲ್ಲೊಂದು ಇಲ್ಲೊಂದು ಅಕ್ಷರಗಳನ್ನು ತೆಗೆದುಕೊಂಡು ನೋಡಬಾರದು ಇಡೀ ಪ್ಯಾರಾವನ್ನು ತೆಗೆದುಕೊಂಡು ಅದರ ಹಿಂದೆ ಏನಿದೆ ಎನ್ನುವುದನ್ನು ನೋಡಬೇಕೆನ್ನುವ ಮಾತನ್ನು ಇದುವರೆವಿಗೂ ಸುಪ್ರೀಂ ಕೋರ್ಟ್ ಹೇಳುತ್ತಾ ಬಂದಿದೆ. ಅಧ್ಯಕ್ಷರೆ, ಆ ದೃಷ್ಟಿಯಿಂದ ಇವರ ಬಗ್ಗೆ ಬರೆದಿರುವ ಇಡೀ ಪ್ಯಾರಾವನ್ನು ಓದಿದಾಗ, ಇವರ ಚಾರಿತ್ರ್ಯವನ್ನು ಹೇಗೆ ವಧೆ ಮಾಡಲು ಹೊರಟಿದ್ದಾರೆನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ರಾಜಕೀಯ ಜೀವನದಲ್ಲಿ ಕೆಲಸ ಮಾಡಿಕೊಂಡು, ಮಂತ್ರಿಯಾಗಿ ತನ್ನ ಕರ್ತವ್ಯಗಳನ್ನು ಕೂಡ ನಡೆಸಿಕೊಂಡು ಬರುತ್ತಿರುವಂಥ ಸಂದರ್ಭದಲ್ಲಿ ಈ ರೀತಿಯಾಗಿ, ಕನ್ನಡ ಹಾಗೂ ಸಂಸ್ಕೃತಿಯ ಮಂತ್ರಿಯಾಗಿ ಕನ್ನಡವೇ ಬರುವುದಿಲ್ಲ ಎಂದು ಹೇಳತಕ್ಕಂಥದ್ದು ಓದಿದರೆ ಜನರು ಏನು ಹೇಳುತ್ತಾರೆ? ಸುಪ್ರೀಂ ಕೋರ್ಟ್ ಇನ್ನೊಂದು ಹೇಳುತ್ತದೆ, ನೀವು ಓದುವುದಷ್ಟೇ ಅಲ್ಲ ಸಾಮಾನ್ಯ ಜನ ಇದನ್ನು

ಯಾವರೀತಿ ಅರ್ಥ ಮಾಡಿಕೊಳ್ಳುತ್ತಾರೆ ಅದನ್ನೂ ಕೂಡ ನೋಡಬೇಕೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಈ ಸಾಮಾನ್ಯ ಜನ ಏನು ತಿಳಿದುಕೊಳ್ಳುತ್ತಾರೆ? ಇವರಿಗೆ ಕನ್ನಡವೇ ಬರುವುದಿಲ್ಲವಂತೆ ಇವರನ್ನು ಕನ್ನಡ ಮತ್ತು ಸಂಸ್ಕೃತಿ ಮಂತ್ರಿ ಮಾಡಿದ್ದಾರೆಂದು ಜನರು ಅಂದುಕೊಂಡರೆ, ಇವರು ಸಾರ್ವಜನಿಕ ಕೆಲಸವನ್ನು ಹೇಗೆ ಮಾಡುವುದಕ್ಕಾಗುತ್ತದೆ? ಮಂತ್ರಿಯಾಗಿ ಶಾಸಕಿಯಾಗಿ, ಸಚಿವಸಂಪುಟ ದರ್ಜೆಯಲ್ಲಿ ಕೆಲಸ ಮಾಡುತ್ತಿರುವಂಥ ಸಂದರ್ಭದಲ್ಲಿ ಜನರು ಏನು ಅಂದುಕೊಳ್ಳುತ್ತಾರೆಂದು ನೋಡಬೇಕಾಗುತ್ತದೆ. ಆ ಕಾರಣದಿಂದ ಇಡೀ ಒಂದು ದೃಷ್ಟಿಕೋನ ಏನಿದೆ ಅದನ್ನು ನೋಡಬೇಕಾಗುತ್ತದೆ; ಇದು ಲೀಲಾದೇವಿಯವರ ಬಗ್ಗೆ ಆಯಿತು. ವಿಮಲಾದೇವಿಯವರ ಬಗ್ಗೆ ಅವರ ಇನ್ನೊಂದು ಮುಖವೆಂದು ಹೇಳುತ್ತಾರೆ. ನಾನು ಅದನ್ನು ಓದಬೇಕೋ ಬೇಡವೋ ಗೊತ್ತಿಲ್ಲ. ಆದರೂ ಕೂಡ ಅಧ್ಯಕ್ಷರೆ, ನೀವು ಓದಬೇಕೆಂದು ಹೇಳಿದ್ದಕ್ಕೆ ಹೇಳುತ್ತಿದ್ದೇನೆ. ಇವರು ಹೇಳುತ್ತಾರೆ, "ತಲೆ ಮೇಲೆ ಸೆರಗು ಹಾಕಿಕೊಂಡು, ಯಾವ ಆಸಕ್ತಿಯೂ ಇಲ್ಲದಂತೆ, ಯಾವುದರ ಅರಿವು ಇಲ್ಲದಂತೆ", ಕಂಟೆನ್ಟ್ಸ್ ಓದಿದರೆ ಹಕ್ಕುಚ್ಯುತಿಯಾಗುವುದಿಲ್ಲ ಅದಕ್ಕೆ ಕಾಂಟೆಕ್ಸ್ ಓದಬೇಕಾಗುತ್ತದೆ. ಏನು ಹೇಳಿದ್ದಾರೆಂದರೆ ಮೇಲ್ನೋಟಕ್ಕೆ "ಸೆರಗು ಹಾಕಿಕೊಂಡಿದ್ದಾರೆ ಎಂದು ಹೇಳಿಬಿಟ್ಟು, ಮುಂದಿನ ವಾಕ್ಯವನ್ನು ಹೇಳುತ್ತಾರೆ, ಈಕೆ "ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವೆ! "ಅಜಯಕುಮಾರ್ ಸರ್‌ನಾಯಕ್ ಎಂಬ ಯುವಜನ ಮತ್ತು ಕ್ರೀಡಾ ಸಚಿವರು ಯಾವುದೇ "ಇನ್‌ಫ್ಲೂಯನ್ಸ್" ಈಕೆಯ ಮೇಲೆ ನಡೆಯುತ್ತದೆ ಎಂಬ ಸುದ್ದಿ ಇದೆ. ಖಾಸಗಿಯಾಗಿ ಆಗಿಂದಾಗ್ಗೆ ಮುಂಬೈ ಮೊದಲಾದ ಕಡೆ ಜಾಲಿ ಟ್ರಿಪ್ ಮಾಡುವ ವಿಮಲಾಬಾಯಿ ತನ್ನ ಇಲಾಖೆಯ ಐಎಎಸ್ ಅಧಿಕಾರಿಗಳ ಪರ ಎಂಬ ಆರೋಪ ಹೊತ್ತು ಕೊಂಡಿದ್ದಾರೆ. ಪಂಚತಾರಾ ಸಂಸ್ಕೃತಿಯ ಮಹಿಳಾ ಸಂಸ್ಥೆಗಳಿಗೆ ಬೆನ್ನುತಟ್ಟುವ....

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸದಸ್ಯರಾದ ಪ್ರಮೀಳಾ ನೇಸರ್ಗಿಯವರು ಮಾತನಾಡುವ ಸಂದರ್ಭದಲ್ಲಿ ನಮಗೆಲ್ಲರಿಗೂ ಮನವರಿಕೆಯಾಗಿದೆ. ಎಲ್ಲವನ್ನೂ ಓದಿ ಕಡತಕ್ಕೆ ಹೋಗುವುದರಿಂದ ಅನಗತ್ಯವಾದ ಪ್ರಚಾರವನ್ನು ಯಾರು ಮಾಡಿದ್ದಾರೆ ಅವರಿಗೆ ಕೊಟ್ಟಂತಾಗುವುದಿಲ್ಲವೇ ಎನ್ನತಕ್ಕಂಥದ್ದು ತಾವು ಟೆಕನ್ ನೋಟ್ ಎಂದು ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು ಅನ್ನಿಸುತ್ತದೆ. ಏನಾಗುತ್ತದೆಂದರೆ, ಇದು ಕಡತಕ್ಕೆ ಹೋಗಿ ಅನಾವಶ್ಯಕವಾಗಿ ಅವರಿಗೆ ಪ್ರಚಾರ ಕೊಟ್ಟಂತಾಗುತ್ತದಲ್ಲಾ ಎನ್ನುವುದು. ಅದನ್ನು ನಾನಂತೂ ಓದಿಲ್ಲ ಆ ಶಬ್ಧಗಳನ್ನು ನೋಡಿದಾಗ, ಅಧ್ಯಕ್ಷರೇ, ನನಗೆ ಬೇಸರವಾಗುತ್ತದೆ, ಅದು ಸರಿಯೋ ತಪ್ಪೋ ಎನ್ನತಕ್ಕಂಥದ್ದನ್ನು ಯೋಚನೆ ಮಾಡಿ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಇದು ನಮ್ಮ ನೋವಲ್ಲ ನಮ್ಮಂಥ ಮಹಿಳಾ ಜನಾಂಗಕ್ಕೆ ಆಗಿರತಕ್ಕಂಥ ನೋವಿನ ಹಿನ್ನಲೆಯಲ್ಲಿ ಇವತ್ತು....

ಶ್ರೀ ಟಿ. ಬಿ. ಜಯಚಂದ್ರ : ನಾನು ನಿಮ್ಮ ಪರವೇ ಇದ್ದೇನೆ, ನಾನೂ ಕೂಡ ನಿಮ್ಮ ಭಾವನೆಗೆ ಸ್ಪಂಧಿಸತಕ್ಕಂಥದ್ದು.

ಅಧ್ಯಕ್ಷರು : ಅಲ್ಲ, ಮಾನ್ಯ ಸದಸ್ಯರಾದ ಜಯಚಂದ್ರರವರು, ತಮ್ಮ ಹಿತವನ್ನು ಗಮನದಲ್ಲಿಟ್ಟು ಕೊಂಡೇ ಇದು ಬೇಸರದ ಕೆಲಸ ಎನ್ನುವ ಅರ್ಥದಲ್ಲಿ ಹೇಳಿದರೇ ಹೊರತು, ಪಾಪ ತಮ್ಮ ಬಗ್ಗೆ ವಿರೋಧ ವಿಲ್ಲ.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಪತ್ರಿಕೆಯಲ್ಲೇ ಬಂದು ಸಾವಿರಾರೂ ಜನರು ಓದಿರುವಾಗ, ಸಾವಿರಾರು ಹಳ್ಳಿಯ ಜನರು ಓದಿರುವಾಗ ಇಲ್ಲಿ ಹೇಳುವುದರಲ್ಲಿ ಏನು ತಪ್ಪಿದೆ?

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈ ಪತ್ರಿಕೆಗಳನ್ನು ಹಳ್ಳಿಯ ಜನರು ಓದಿದರೆ ನಾವು ಪ್ರತಿನಿಧಿಸತಕ್ಕ ಕ್ಷೇತ್ರದ ಜನರು ಏನು ಅಂದುಕೊಳ್ಳಬಹುದನ್ನು ಯೋಚನೆ ಮಾಡಬೇಕು.

(ಗೊಂದಲ)

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಅಡಿಕೆಯಲ್ಲಿ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲವೆಂದು ಗಾದೆ ಇದೆ, ಒಂದು ಸಾರಿ ಒಂದು ಹೆಣ್ಣಿಗೇನಾದರೂ ಚ್ಯುತಿ ಬಂದರೆ ಆ ಹೆಣ್ಣು ಕಳಂಕರಹಿತಳಾಗಬೇಕಾದರೆ ಮುಕ್ತನಾಗಿ ಇಲ್ಲಿ ಚರ್ಚೆಯಾಗಬೇಕಾದ್ದು ಅವಶ್ಯಕ....

ಅಧ್ಯಕ್ಷರು : ಜಯಚಂದ್ರರವರೇ ತಾವು ಎತ್ತಿದಂಥ ವಿಷಯ ಸಾಧಾರಣವಾದ ವಿಷಯವಾದರೂ ಕೂಡ, ನಾನು ಅದಕ್ಕೆ ಉತ್ತರ ಹೇಳುವುದಕ್ಕೆ ಬಯಸಲಿಲ್ಲ. ಶ್ರೀಮತಿ ಜ್ಯೋತಿ ರೆಡ್ಡಿಯವರು ಇದು ಪತ್ರಿಕೆಯಲ್ಲಿ ಅಚ್ಚಾಗಿದೆ. ಸಾವಿರಾರು ಪತ್ರಿಕೆಗಳು ಮಾರಾಟವಾಗುತ್ತಿವೆ. ರಾಜ್ಯಕ್ಕೆಲ್ಲಾ ಜಗಜ್ಜಾಹಿರ ಮಾಡಿದ್ದಾರೆ ಇಲ್ಲಿ ಮುಚ್ಚಿಡುವುದಕ್ಕೆ ಏನಿದೆ ಎಂದು ಕೇಳುತ್ತಿದ್ದಾರೆ. ಆದುದರಿಂದ, ಇದು ಸರಿ ನಾನು ನಿಮ್ಮ ಸೆಂಟಿಮೆಂಟನ್ನು ಗೌರವಿಸಿದರೂ ಕೂಡ, they are more hurt. There is nothing to be concealed. ಇನ್ನು ಉಳಿದಿರುವೇನಂದು ಕೇಳುತ್ತಿದ್ದಾರೆ. ನಮ್ಮದೆಲ್ಲಾ ಆಗಿದೆಯಲ್ಲಾ ಇನ್ನೇನು ಮುಚ್ಚಿಡುತ್ತೀರೆಂದು ಕೇಳುತ್ತಿದ್ದಾರೆ. Therefore, let them have. ಮೇಡಂ, ತಾವು ಮುಂದುವರೆಸಿ.

ಶ್ರೀ ಬಿ. ಬಿ. ಶಿವಪ್ಪ : ಇದೇ ವಿಷಯಗಳು ಪತ್ರಿಕೆಯಲ್ಲಿ ಬರುವುದರಿಂದ ಪತ್ರಿಕೆಗಳು ಜಾಸ್ತಿ ಖರ್ಚಾಗುತ್ತಿದ್ದಾವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಅಧ್ಯಕ್ಷರೇ, ವಿಮಲಬಾಯಿ ದೇಶಮುಖ್‌ರವರ ಬಗ್ಗೆ ಈ ರೀತಿ ಪತ್ರಿಕೆಯಲ್ಲಿ ಬರೆದಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಶೇ. 100 ರಷ್ಟು ಧನ ಸಹಾಯ ಪಡೆಯುವಂಥ ಸಂಘ ಸಂಸ್ಥೆಗಳಿವೆ. ಇಂಥವುಗಳಲ್ಲಿ ಕೆಲವಕ್ಕೆ ಹಣ ದೋಚಲು ಸ್ವತಃ ಅವಕಾಶ ಕಲ್ಪಿಸಿಕೊಡುವ ವಿಮಲಾಬಾಯಿ ಈ ಸಂಸ್ಥೆಗಳ ಬಗ್ಗೆ ಬರುವ ದೂರುಗಳನ್ನು ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. It amounts directly to some privilege.

MR. SPEAKER : It is exactly in this regard I want more information. You can proceed now.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೈಸೂರಿನಲ್ಲಿರುವ ವಿದೇಶಿ ನೆರವನ್ನು ಪಡೆಯುತ್ತಿರುವ ಇಂಥ ಸಂಸ್ಥೆಯೊಂದರ ನೌಕರರಿಗೆ ಸಂಬಳವನ್ನೂ ನೀಡದ ಬಗ್ಗೆ ದೂರು ಬಂದಿದ್ದರೂ ಆ ಬಗ್ಗೆ ವಿಮಲಾಬಾಯಿ ತಲೆ ಕೆಡಿಸಿಕೊಳ್ಳಲಿಲ್ಲ. ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಅರ್ಹ ಬಡ ಹೆಣ್ಣುಮಕ್ಕಳಿಗೆ 10,000 ರೂ.ಗಳಿಂದ ಒಂದು ಲಕ್ಷ ರೂ.ಗಳವರೆಗೆ ಸಾಲದ ವ್ಯವಸ್ಥೆ ಇದ್ದರೂ ಅಂಥ ಹೆಣ್ಣು ಮಕ್ಕಳಿಗೆ ಅರ್ಜಿಯೂ ಸಿಕ್ಕುತ್ತಿಲ್ಲ, ಸಾಲವೂ ಸಿಕ್ಕುತ್ತಿಲ್ಲ. ಇಂಥ ಸಾಲಕ್ಕೆ 3,000 ರೂ. ಸಬ್ಸಿಡಿ ಇದ್ದು ಅದನ್ನು ಸಂಬಂಧಪಟ್ಟ ಅಧಿಕಾರಿಗಳು ಲಂಚವಾಗಿ ಕೇಳುತ್ತಿರುವುದನ್ನು ತಡೆಗಟ್ಟಲು ವಿಮಲಾಬಾಯಿಗೆ ಸಾಧ್ಯವಾಗಿಲ್ಲ. ಬಹು ಮಹಡಿ ಕಟ್ಟದಲ್ಲಿರುವ ಸರ್ಕಾರಿ ನೌಕರರ ಮಕ್ಕಳಿಗಾಗಿ ಇರುವ ಸರ್ಕಾರದ ಶಿಶುಪಾಲನಾ ಕೇಂದ್ರವನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟಿರುವ ವಿಮಲಾಬಾಯಿ ಹೊಸ ದಾಖಲೆಯನ್ನೇ ಸೃಷ್ಟಿಸಿದ್ದಾರೆ. ಈಕೆಯ ಸಾಧನೆ ಎಂದರೆ ವರ್ಣರಂಜಿತ ಕೈಪಿಡಿ, ಕರಪತ್ರ, ಪೋಸ್ಟರ್‌ಗಳನ್ನು ಮುದ್ರಿಸಿರುವುದು ಮತ್ತು ಎಲ್ಲರಿಗೂ ಇಷ್ಟವಾಗುವ ವಾರ್ಷಿಕ ವರದಿಯನ್ನು ಸಲ್ಲಿಸಿರುವುದು. ಅಂದರೆ ಇಷ್ಟೇ ಇವರ ಕೆಲಸ ಎಂದು ಬರೆದಿದ್ದಾರೆ. ಇನ್ನು ಸನ್ಮಾನ್ಯ ಲಲಿತಾ ನಾಯಕ್‌ರವರ ಬಗ್ಗೆ ಹೀಗೆ ಬರೆದಿದ್ದಾರೆ. ಸದನದಲ್ಲಿ ಎಷ್ಟೋ ಸಲ ಗಂಭೀರವಾಗಿ ಅರ್ಥಪೂರ್ಣವಾಗಿ ಮಾತಾಡಿರುವ, ದುರ್ಬಲ ವರ್ಗದ ಮಹಿಳೆಯರ ಈಗಿನ ಎಲ್ಲಾ ನೋವುಗಳಿಗೂ ಮೇಲ್ಜಾತಿಯವರೇ ಕಾರಣ ಎಂದು ನಂಬಿಕೊಂಡು ಹಳಸಲು ಸಿದ್ಧಾಂತಗಳ ನೇಣಿಗೆ ಕತ್ತು ತುರುಕುತ್ತಾ ಬಂದಿರುವುದು ಈಕೆಯ ಹುಂಬತನಕ್ಕೆ ಸಾಕ್ಷಿಯಾಗಿದೆ. ಆದರೆ ನಾವು ಯಾವತ್ತೂ ಕೂಡ ಈ ರೀತಿಯಲ್ಲಿ ಲಲಿತಾ ನಾಯಕ್‌ರವರು ಮಾಡುವುದನ್ನು ನೋಡಿಲ್ಲ, ಅಥವಾ ಮೇಲ್ಜಾತಿ, ಕೀಳ್ಜಾತಿ ಎಂದು ಅವರು ಹೇಳಿದ್ದನ್ನೂ ಕೂಡ ನೋಡಿಲ್ಲ. ಅಂದರೆ ಮಹಿಳಾ ಶಾಸಕಿಯಾಗಿ ಈ ರೀತಿ ಮಾಡುತ್ತಾರೆ ಎಂದರೆ ಇದು ಸರಿಯೇ? ಇನ್ನು ಹೇಮಾವತಿ ಬಗ್ಗೆ ಏನು ಬರೆದಿದ್ದಾರೆಂದರೆ, ಅವರ ಹೆಸರನ್ನು ತಲೆ ಬರಹದಲ್ಲಿ ಹೇಮಾ ಎನ್ನುವುದನ್ನು ಇನ್‌ವರ್ಟೆಡ್ ಕಾಮ ಹಾಕಿ ಕೊನೆಗೆ 'ವತಿ' ಎಂಬುದನ್ನು ಬರೆದಿದ್ದಾರೆ. ಏಕೆ ನಾನು ಹೇಳಿದೆಯೆಂದರೆ ಪಬ್ಲಿಕೇಷನ್ ಹೇಗಿದೆ ಎಂಬುದೂ ಕೂಡ ಮುಖ್ಯವಾಗಿರುತ್ತದೆ. ಬುದ್ಧಿ ಭದ್ರಾವತಿ ಚಿನ್ನದ್ದು, ಹೆಸರು ಮಾತ್ರ ಹೇಮಾ (ಚಿನ್ನ) ವತಿ. ಮಾಜಿ ಶಾಸಕರೊಬ್ಬರ ಪುತ್ರಿಯಾದ ಹೇಮಾವತಿ ಬೆಂಗಳೂರು ಕಾರ್ಪೊರೇಟರ್ ಆಗಿದ್ದವರು. ಕುಳಿತಲ್ಲೇ ಕಬಳಿಸುವುದಕ್ಕೆ ಕಾರ್ಪೊರೇಷನ್‌ನಲ್ಲಿ ಒಳ್ಳೆಯ ತರಬೇತಿ ಪಡೆದಿರುವ ಹೇಮಾವತಿ ಇವರಾಗಿದ್ದಾರೆ. ಅಧ್ಯಕ್ಷರೇ, ಹೇಮಾವತಿಯವರು ಬೆಂಗಳೂರು ಕಾರ್ಪೊರೇಟರ್ ಆಗಿರಲೇ ಇಲ್ಲ. ಯಾವತ್ತೂ ಅವರು ಕಾರ್ಪೊರೇಟರ್ ಆಗಿರಲಿಲ್ಲ. ಕುಳಿತಲ್ಲೇ ಕಬಳಿಸುವುದಕ್ಕೆ ಒಳ್ಳೆಯ ತರಬೇತಿ ಪಡೆದಿರುವ ಹೇಮಾವತಿ ಶಾಂತಿನಗರ (ಎಸ್‌ಸಿ ಮೀಸಲು) ಕ್ಷೇತ್ರದಿಂದ ಶಾಸಕಿಯಾಗಿ...

ಅಧ್ಯಕ್ಷರು : ಒಂದ್ನಿಮಿಷ ಈ ಬಣ್ಣದ ಬಗ್ಗೆಯೇ ಎಷ್ಟು ವಿಶ್ಲೇಷಣೆಯನ್ನು ಲೋಹಿಯಾರವರು ಮಾಡಿದ್ದಾರೆ. ನಿಮಗೆ ನೆನಪಿದೆಯೇ ರಾಮ-ಕೃಷ್ಣ ಎಂಬ ಒಂದು ಆರ್ಟಿಕಲ್‌ನಲ್ಲಿ ಬಣ್ಣದ ಬಗ್ಗೆ ಎಷ್ಟು ಧೀರ್ಘವಾದಂಥ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ ಲೋಹಿಯಾರವರು.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಅವರು ಮೈ ಬಣ್ಣ ಮತ್ತು ಸೌಂದರ್ಯ ಎಂದು ಹೇಳಿ ಲೋಹಿಯಾರವರು ಹೇಳಿದ್ದಾರೆ. All women are beautiful, some are more ಎಂದು

ಅವರು ಹೇಳಿರುವುದು. ಅದು ಮೈಬಣ್ಣದ ಬಗ್ಗೆ ಹೇಳಿರುವುದು. ಅದೂ ಮೈ ಬಣ್ಣದ ವಿಷಯದಲ್ಲಿ ಕಪ್ಪೇ ಸೌಂದರ್ಯ ಮತ್ತು ಬಹಳ ಸುಂದರ. ಆದುದರಿಂದಲೇ ಶ್ಯಾಮಲ ವರ್ಣವನ್ನು ಕೃಷ್ಣಗೆ ಆರೋಪ ಮಾಡುತ್ತೇವೆ. ಆದ್ದರಿಂದಲೇ ಈ ಪ್ಯಾಂಪರ್ಸ್ ಕೂಡ ಅದೇ ರೀತಿಯಲ್ಲಿ ನೋಡಬೇಕು ಎನ್ನುವ ವಿಚಾರವನ್ನು ಲೋಹಿಯಾರವರು ಹೇಳಿದ್ದಾರೆ.

ಅಧ್ಯಕ್ಷರು : ಅದೇ ರೀತಿ ಕಾಂಪ್ಲೆಕ್ಸ್ ಹೇಗೆ ಡೆವಲಪ್ ಆಗುತ್ತವೆ ಎನ್ನತಕ್ಕಂಥದ್ದರಲ್ಲಿ ರೇಷಿಯಲ್ ಡಿಸ್ಕ್ರಿಮಿನೇಷನ್ ಬಗ್ಗೆ ಕೂಡ ಅವರು ಅದರಲ್ಲಿ ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಿಗ್ರೋಸ್ ಬಗ್ಗೆ ಬಂದಾಗ ಅಮೆರಿಕಾದಲ್ಲಿ ಬಹಳ ವಿಶ್ಲೇಷಣೆ ಇದರ ಬಗ್ಗೆ ಆಗಿದೆ. ನಾನು ಏಕೆ ಹೇಳುತ್ತೇನೆಂದರೆ ಹೇಮಾವತಿಯವರು ಯಾವತ್ತೂ ಕಾರ್ಪೊರೇಟರ್ ಆಗಿಯೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಸೌಂದರ್ಯವನ್ನು ಅಳತೆ ಮಾಡುವುದು ಹಿಂದೆ ಇತ್ತು. ಕಪ್ಪಿನಲ್ಲೂ ಕೂಡ ಸೌಂದರ್ಯವನ್ನು ಕಾಣುವಂಥ ವ್ಯಕ್ತಿತ್ವವನ್ನು ಹೊಂದಬೇಕು. ಅದಕ್ಕೆ ದ್ರೌಪದಿಯನ್ನು ಉದಾಹರಣೆಯಾಗಿ ಹೇಳುತ್ತಾರೆ.

MR. SPEAKER : Exactly, That's what Lohia says.

SRI M.P. PRAKASH : Beauty lies in the eyes of the beholder'.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮುಂದಿನ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ. "ಪ್ರತಿದಿನ ಬೆಳಿಗ್ಗೆ ಬ್ಯೂಟಿ ಪಾರ್ಲರ್‌ಗೆ ಹೋಗಿ ಸೌಂದರ್ಯ ವೃದ್ಧಿಸಿಕೊಂಡು ಬರುತ್ತಾರೆ". ಅಧ್ಯಕ್ಷರೇ, ಇವರೇನು ಸಿ.ಐ.ಡಿ.ಗಳೇ? ಇವರೇನು ಹೋಗಿ ನೋಡಿರುತ್ತಾರೆಯೇ, ಹೇಮಾವತಿಯವರು ಬೆಳಿಗ್ಗೆ ಎಲ್ಲಿಗೆ ಹೋಗುತ್ತಾರೆಂದು. ಬೆಳಿಗ್ಗೆ ಎದ್ದರೆ ನಾವು ಮನೆ ಕೆಲಸ ಮುಗಿಸಿ ಇಲ್ಲಿಯ ಸಭೆಗಳ ಹಾಜರಿ ಪುಸ್ತಕಕ್ಕೆ ಸಹಿ ಹಾಕುವುದಕ್ಕೆ ನಮಗೆ ಟೈಮ್ ಇರುವುದಿಲ್ಲ. ಬೆಳಿಗ್ಗೆ ಎದ್ದು ಅಸೆಂಬ್ಲಿಗೆ ಬಂದು ಸಾಯಂಕಾಲ ಸಭೆ ಮುಗಿದ ಮೇಲೆ ಮನೆಗೆ ಹೋಗುವುದಕ್ಕೇ ನಮಗೆ ರಾತ್ರಿ 10 ಗಂಟೆಯಾಗುತ್ತದೆ, ಹೀಗಿರುವಾಗ ಶಾಸಕಿ ಬ್ಯೂಟಿ ಪಾರ್ಲರ್‌ಗೆ ಹೋಗುತ್ತಾರೆಂದು ಬರೆದಿರುವುದರಲ್ಲಿ ಅರ್ಥವೇ ಇಲ್ಲ. ಒಂದು ವೇಳೆ ಹೋದರೂ ತಪ್ಪಿಲ್ಲ, ಆದರೆ ದಿವಸ ಬೆಳಿಗ್ಗೆ ಹೋಗುತ್ತಾರೆಂದು ಬರೆದರೆ ಇದರಲ್ಲಿ ಅರ್ಥವಿದೆಯೇ? ಇನ್ನು ಮುಂದೆ ಪತ್ರಿಕೆಯಲ್ಲಿ ಬರೆಯುತ್ತಾ, ಶಾಂತಿನಗರದ ಒಂದೆರಡು ಕೊಳಗೇರಿಗಳಲ್ಲಿ ಗುಡಿಸಲುಗಳು ಬೆಂಕಿಬಿದ್ದು ನಾಶವಾದ ಸಂದರ್ಭದಲ್ಲಿ, ಬ್ರಿಗೇಡ್ ರೋಡ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮತ್ತೆ ಆರಂಭಿಸಿದಾಗ ಹೇಮಾವತಿಯವರ ಕೈಗಳ ಪಾತ್ರ, ಇದ್ದ ಬಗ್ಗೆ ಬಲವಾಗಿ ಕೇಳಿ ಬಂದಿತ್ತು. ಪತ್ರಕರ್ತರಿಗೆ ಪೂಸಿ ಹೊಡೆಯುವುದರಲ್ಲಿ, ಮನೆಗೆ ಬರುವ ಕೆಲವು ಪತ್ರಕರ್ತರಿಗೆ ಅಗತ್ಯ ಆತಿಥ್ಯ ಒದಗಿಸುವುದರಲ್ಲೂ ಹೇಮಾವತಿ ಹೆಸರು ಮಾಡಿದ್ದಾರೆ. ಏನು ಅಧ್ಯಕ್ಷರೇ ಹೀಗೆ, ಪತ್ರಕರ್ತರು ಯಾವಾಗ ಇವರ ಮನೆಗೆ ಹೋಗಿದ್ದರು?

ಅಧ್ಯಕ್ಷರು : ಆಕೆಯ ವಿಚಾರವನ್ನು ಪತ್ರಕರ್ತರು ಬರೆಯುವುದೇ ಇಲ್ಲ. ಸುಮ್ಮಸುಮ್ಮನೆ ಈ ರೀತಿ ಬರೆಯುವುದು ಸರಿಯಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇನ್ನು ಮೇಲ್ಮನೆ ಸದಸ್ಯೆಯಾದ ನಫೀಜಾ ಫಜಲ್ ಬಗ್ಗೆ ಬರೆದಿದ್ದಾರೆ. ಇದರ ಬಗ್ಗೆ ಮೇಲ್ಮನೆಯಲ್ಲಿ ಈಗಾಗಲೇ ಚರ್ಚೆಗೆ ಬಂದಿರಬಹುದು, ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಒಂದು ವಿಚಾರವನ್ನು ಮಾತ್ರ ಈ ಸದನದಲ್ಲಿ ತಮ್ಮ ಗಮನಕ್ಕೆ ತರಲೇಬೇಕು. ಅದರಲ್ಲಿ ಮೇಲ್ಮನೆ ಸದಸ್ಯರಾಗಲಿ ಅಥವಾ ಕೆಳಮನೆ ಸದಸ್ಯರಾಗಲಿ ಒಟ್ಟಿನಲ್ಲಿ ಹೆಣ್ಣಿನ ಬಗ್ಗೆ ಹೇಳಿರುವುದು. ಮೇಲ್ಮನೆ ಉಪ ಸಭಾಪತಿಯಾದ ರಾಣಿ ಸತೀಶ್‌ರವರ ಬಗ್ಗೆ ಬರೆದಿದ್ದಾರೆ. ತಲೆಬರಹದಲ್ಲಿ (ಮಹಾ) ರಾಣಿ ಸತೀಶ್ ಎಂದು ಬರೆದಿದ್ದಾರೆ. ವಿಧಾನ ಪರಿಷತ್‌ನ ಉಪ-ಸಭಾಪತಿಯೂ ರಾಜ್ಯ ಕಾಂಗ್ರೆಸ್‌ನ ಮಹಿಳಾ ವಿಭಾಗದ ಅಧ್ಯಕ್ಷೆಯೂ ಆಗಿರುವ ರಾಣಿ ಸತೀಶ್ ನೀಟಾಗಿ ಡ್ರೆಸ್ ಮಾಡಿಕೊಂಡು ಓಡಾಡುವುದರಿಂದಷ್ಟೇ ಗಮನ ಸೆಳೆದಿದ್ದಾರೆ. ಇವರ ಪತಿದೇವರು ವಿಧಾನಸೌಧದಲ್ಲಿರುವ ಪತ್ನಿಯ ಕಚೇರಿಯಲ್ಲಿ ಸದಾ ಕಾಣಸಿಗುತ್ತಾರೆ. ಅಧ್ಯಕ್ಷರೇ, ನನಗೆ ಗೊತ್ತಿರುವ ಹಾಗೆ ರಾಣಿ ಸತೀಶ್‌ರವರ ಪತಿಯವರು ಅವರ ಕಚೇರಿಗೆ ಬರುವುದೇ ಇಲ್ಲ. ಆದರೂ ಬಂದರೂ ತಪ್ಪೇನೂ ಅಲ್ಲ. ಅದು ಬೇರೆ ವಿಷಯ. ಆದರೆ ಬಂದಿಲ್ಲ. ಈಕೆಯ ಕಚೇರಿಯಲ್ಲಿರುವ ಗುತ್ತಿಗೆ ನೌಕರರ ಶೋಷಣೆ, ಕಚೇರಿಯಲ್ಲಿರುವ ಫೋನನ್ನು ಯಾರ್‍ಯಾರಿಗೋ ಎಸ್‌ಟಿಡಿ: ಐಎಸ್‌ಡಿ ಕರೆಗಳಿಗೆ ಬಳಸಲು ಅವಕಾಶ ನೀಡಿ ಹಣ ಸಂಗ್ರಹಿಸುವುದರಲ್ಲೂ ಪತಿದೇವರು ನಿರತರಾಗಿದ್ದಾರಂತೆ! ಮಹಿಳಾ ಕ್ಲಬ್‌ಗಳಲ್ಲಿ, ಫೋಟೋ, ದೂರದರ್ಶನಗಳಲ್ಲಿ ಮಾತ್ರ ಕಾಣಸಿಗುವ ರಾಣಿ ಸತೀಶ್ ಭಾಷಣಕ್ಕಾಗಿ ಹಾತೊರೆಯುತ್ತಿರುತ್ತಾರೆ. ಪ್ರವಾಸ ಹೋಗದೆ ಟಿಎ:ಡಿಎ ಪಡೆಯುವುದು, ಕಚೇರಿಗೆ ಬೇಕಾದ ಸ್ಟೇಷನರಿ ಖರೀದಿಯಲ್ಲೂ ಕಮೀಷನ್ ಪಡೆಯುವ ಈಕೆಯ ಪಿ.ಎ:ಪಿ.ಎಸ್‌ಗಳು ಎಷ್ಟೋ ಸಲ ಬದಲಾಗಿರುವುದೇ ನಿಗೂಢವಾಗಿದೆ. ಮಾತಿಗೂ, ಕೃತಿಗೂ ಬಹಳ ಅಂತರ ಇಟ್ಟುಕೊಂಡಿರುವ ಈಕೆ ನೌಕರರನ್ನು ಶೋಷಿಸುವಲ್ಲಿ ಮಹತ್ಸಾದನೆ ಮಾಡಿದ್ದಾರೆ. ಈಕೆ ಲೀಲಾದೇವಿ ಪ್ರಸಾದ್‌ರೊಂದಿಗೆ ಅಂತರರಾಷ್ಟ್ರೀಯ ಮಹಿಳಾ ಸಮಾವೇಶಕ್ಕೆ ಹೋಗಿ ಬಂದಿರುವುದು ಏತಕ್ಕಾಗಿಯೋ? ಅಧ್ಯಕ್ಷರೇ, ನನಗೆ ಗೊತ್ತಿರುವ ಹಾಗೆ ಲೀಲಾದೇವಿಯವರು ಅಂತರರಾಷ್ಟ್ರೀಯ ಮಹಿಳಾ ಸಮಾವೇಶಕ್ಕೆ ಹೋಗಿಯೇ ಇಲ್ಲ. ಅಧ್ಯಕ್ಷರೇ, ಇಲ್ಲಿ ಸಾರ್ವಜನಿಕ ದೃಷ್ಟಿಯಲ್ಲಿ ಏನಾಗುತ್ತದೆಂದರೆ, ಲೀಲಾದೇವಿಯವರು ಹೋಗಿದ್ದರೋ ಅಥವಾ ಹೋಗಿಲ್ಲವೋ ಎಂದು ಬರುತ್ತದೆ.

ಅಧ್ಯಕ್ಷರು : ಅದು ಎಲ್ಲಿ ಮುಖ್ಯವಲ್ಲದಿದ್ದರೂ ಪ್ರವಾಸ ಹೋಗದೇ ಟಿಎ:ಡಿಎ ತೆಗೆದುಕೊಳ್ಳುತ್ತಾರೆ that comes to the subject straight. I am trying to pick the particular sentence with which I am concerned. All other things I don't think we should worry.

ಶ್ರೀ ಎಂ. ವೀರಪ್ಪ ಮೊಯಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಹೇಳುವುದಿಲ್ಲ. ಈ ರೀತಿ ಪೇಪರುಗಳಲ್ಲಿ ಮಹಿಳೆ ಶಾಸಕರ ಮೇಲೆ ಅಪಪ್ರಚಾರ ಮಾಡುವುದರಿಂದ ಏನಾಗುತ್ತದೆಂದರೆ, ಈಗಾಗಲೇ ಅನೇಕ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಬಂದು ಕೆಲಸ ಮಾಡಲಿಕ್ಕೆ ಅನುಮಾನ, ಶಂಕೆ ಬರುತ್ತಿರತಕ್ಕಂಥ ಸಂದರ್ಭದಲ್ಲಿ, ಆ ವರ್ಗದವರನ್ನೇ ಇವತ್ತು ಆಯ್ಕೆ ಮಾಡಿ ಈ ತರಹದ ನಾನಾ ಆರೋಪಗಳನ್ನು ಮಾಡುವುದರಿಂದ ಏನಾಗುತ್ತದೆಂದರೆ, ಒಂದು ತರಹ ಶಾಸನಸಭೆಗಳಿಗೆ, ಸಾರ್ವಜನಿಕ

ಜೀವನಕ್ಕೆ ಮಹಿಳೆಯರು ಬರಬಾರದು ಎಂದು ಹೇಳುವುದಕ್ಕೆ it is a very serious issue. ಇದು ಸಾಧಾರಣ ವಿಷಯವೆಂದು ಪರಿಗಣಿಸುವುದು ಅಲ್ಲ. ಒಂದು ವರ್ಗವನ್ನೇ ಇವತ್ತು ಶಾಸನ ಸಭೆಗಳಿಗೆ ಬರಬಾರದು, ಸಾರ್ವಜನಿಕ ಜೀವನಕ್ಕೆ ಬರಬಾರದು ಎಂದು ಹೇಳಿ ಈ ರೀತಿ ಮಾಡುತ್ತಿದ್ದಾರೆ. ಇದರಿಂದ ಅವರು ಬಹಳ ಹೆದರಿಬಿಡುತ್ತಾರೆ. ಏಕೆಂದರೆ ಮರ್ಯಾದೆಯಿಂದ ಜೀವನ ಮಾಡತಕ್ಕಂಥ, ಗೌರವದಿಂದ ಜೀವನ ಮಾಡತಕ್ಕಂಥ ಅವಕಾಶವೇ ಇಲ್ಲಿ ಇರುವುದಿಲ್ಲ. ಆದ್ದರಿಂದ ಇದನ್ನು ತಾವು ಮಾಮೂಲಾಗಿ ಕ್ಷಮಿಸಿ, ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುವುದರ ಬದಲು ಇದನ್ನು ಗಂಭೀರ ವಿಷಯವಾಗಿ ಪರಿಗಣನೆಗೆ ತೆಗೆದುಕೊಂಡು, ಬಹುಶಃ Let there be a discussion in this House. ಏಕೆಂದರೆ ಒಂದು ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ವರ್ಗಾಯಿಸಿದರೆ ಅವರು ವರದಿಯನ್ನು ಕೊಡುತ್ತಾರೆ. ಅದು ಮಾಮೂಲಾಗಿ ಹೊರಟುಹೋಗುತ್ತದೆ. ಅದಕ್ಕೆ ಗಾಂಭೀರ್ಯತೆ ಬರುವುದಿಲ್ಲ ಮತ್ತು ಅದಕ್ಕೆ ಯಾವುದೇ ತರಹದ ಶಿಕ್ಷೆ ಆಗುವುದಿಲ್ಲ. ಒಂದು ತರಹ ಅಧಿಕಾರಿಗಳು ತಪ್ಪು ಮಾಡಿದರೆ ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದ ಹಾಗೆ ಆಗುತ್ತದೆ. ಬಹುಶಃ ಈ ಇಷ್ಯೂವನ್ನು ನಾವು ಆ ತರಹ ಪರಿಗಣಿಸದೆ ಬಹಳ ಗಂಭೀರವಾಗಿ ನಿರ್ಣಯ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾನು ಅವರೆಲ್ಲರ ವಾದವನ್ನು ಕೇಳಿ, ನನ್ನ ನಿರ್ಣಯವನ್ನು ಪ್ರಕಟಣೆ ಮಾಡುವ ಮೊದಲು ಕಾನ್‌ಸೆನ್‌ಸಸ್ ತೆಗೆದುಕೊಂಡು ಅಗತ್ಯವಿದ್ದರೆ 5 ನಿಮಿಷ ಮತ್ತೆ ಯಾರನ್ನಾದರೂ ಕೂರಿಸಿ, ತಮ್ಮಲ್ಲಿ ಹಿರಿಯರು ಯಾರ್‍ಯಾರು ಇದ್ದೀರಿ ತಮ್ಮನ್ನೆಲ್ಲಾ ಕರೆಸಿ ನಿಮ್ಮ ಅಭಿಪ್ರಾಯ ತೆಗೆದುಕೊಂಡು then only, I will spell out. I will not act in haste. ನಾನು ಆತುರದಲ್ಲಿ ಯಾವುದನ್ನೂ ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಏಕೆಂದರೆ ಈಗಿನ ಕಾಲದಲ್ಲಿ ಪ್ರಿವಿಲೇಜ್ ಬಗ್ಗೆ ಯಾರೂ ಲಕ್ಷ್ಯ ಕೊಡುತ್ತಿಲ್ಲ. ಮತ್ತು ಪ್ರಿವಿಲೇಜ್ ಹೌಸ್‌ನಲ್ಲಿ ಬರುತ್ತದೆ. ನಂತರ ಪ್ರಿವಿಲೇಜ್ ಕಮಿಟಿಗೆ ಹೋಗುತ್ತದೆ, ಅವರು ಏನೋ ವರದಿ ಕೊಡುತ್ತಾರೆ ಅಲ್ಲಿಗೆ ಅದು ಮುಗಿದು ಹೋಗುತ್ತದೆಂದು ಎಲ್ಲರಿಗೂ ಗೊತ್ತಾಗಿದೆ. ಆದ್ದರಿಂದ ಈ ಸದನದ ಬಗ್ಗೆ ಇರತಕ್ಕಂಥ ಭಯ ಅಥವಾ ಶಿಸ್ತಿಗೆ, ಅಥವಾ ಗೌರವಕ್ಕೆ ಯಾರೂ ಸಹ ಮನ್ನಣೆ ಕೊಡುತ್ತಿಲ್ಲ. ಆ ಸ್ಥಿತಿಗೆ ಈಗ ಬಂದುಬಿಟ್ಟಿದೆ. ಆದ್ದರಿಂದ ನಾವು ಕೂಡ ಅನೇಕ ಬಾರಿ ಇಲ್ಲಿ ಮಾತನಾಡುವಾಗ ಬಹಳ ಜಾಗ್ರತೆಯಾಗಿ ಇರುತ್ತೇವೆ. ಈಗ ನಾನು ಇಲ್ಲಿ ಮಾತನಾಡಿರುವುದರಿಂದ ನಾಳೆ ನನ್ನ ಮೇಲೆಯೇ ಒಂದು ಅಟ್ಯಾಕ್ ಪ್ರಾರಂಭವಾಗಿರುತ್ತದೆ. ಆದ್ದರಿಂದ ಎಲ್ಲರಿಗೂ ಭಯ ಇರುತ್ತದೆ. ನಾನು ನಿರ್ವಂಚನೆಯಿಂದ ಈ ಸದನದಲ್ಲಿ ಹೇಗೆ ಮಾತನಾಡುವುದು ಅಥವಾ ತಮ್ಮ ಕಾರ್ಯನಿರ್ವಹಿಸುವುದು ಎಂದು ಹೇಳಿ ಕೂಡ ಅದು ಒಂದು ರೀತಿಯ ಭಯದ, ಶಂಕೆಯ ವಾತಾವರಣ ಯಾವಾಗಲೂ ಬರುತ್ತದೆ.

MR SPEAKER : I agree with you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇವರು ಮಾತನಾಡುವುದನ್ನು ಬಿಟ್ಟರೆ, ಅವರೇನಾದರೂ ಬರೆಯುವುದನ್ನು ಬಿಡುತ್ತಾರೆಯೇ? ಮಾತನಾಡುವಾಗ ಮಾತನಾಡಲೇ ಬೇಕು.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯರಾದಂಥ ಖರ್ಗೆಯವರು ಹೇಳಿದ ಹಾಗೆ, ನಾವು ಮಾತನಾಡಿದ ತಕ್ಷಣ ಬರೆಯುವುದನ್ನು ಬಿಡುತ್ತಾರೆಂದು ನಾವು ತಿಳಿದುಕೊಂಡಿಲ್ಲ. ಆದರೆ ಏನು ಬರೆಯಬೇಕು, ಹೇಗೆ ಬರೆಯಬೇಕು ಎನ್ನುವ ಸಿದ್ಧಾಂತದ ಮೇಲೆ ಬರೆಯಬೇಕು ಎನ್ನುವುದರ ಬಗ್ಗೆ ಹೇಳುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು ಬಹುಶಃ ಮಾನ್ಯ ಲೀಲಾವತಿ ಪ್ರಸಾದ್ ರವರಿಗೆ ಅರ್ಥವಾಗಿಲ್ಲ. ನಾನು ಹೇಳಿದ್ದು ಏನೆಂದರೆ 'ನೀವು ಭಯಬಿದ್ದು ಮಾತನಾಡಬೇಕು, ಮಾತನಾಡಬಾರದು ಎಂದರೆ ಹೇಗೆ? ಮಾತನಾಡುವುದನ್ನು ಮಾತನಾಡಲೇ ಬೇಕು. ನೀವು ಮಾತನಾಡದೆ ಹೋದರೂ ಬರೆಯುತ್ತಾರೆಂದು' ಹೇಳಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಇದನ್ನು ಮುಂದುವರಿಸುತ್ತಾ, ಶ್ರೀಮತಿ ಸ್ವರ್ಣಾ ಪ್ರಭಾಕರ್‌ರವರ ಬಗ್ಗೆ ಹೇಳಿದ್ದಾರೆ.

MR. SPEAKER : She is not a member of this House.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದನ್ನು ಹೇಳುತ್ತೇನೆ "ಸ್ವರ್ಣ ಪ್ರಭಾಕರ್ ಎಂಬ ದಿಟ್ಟೆ" ದೇವೇಗೌಡರು ಪ್ರಧಾನಿಯಾಗಿದ್ದಾಗ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಡೆದ ಪ್ರಸಂಗವಿದು. ಶಿವರಾಮೇಗೌಡ ಎಂಬ ಎಂಎಲ್ಎ ತಲೆಹರಟೆ ಮಾಡಿ ಮಹಿಳೆಯೊಬ್ಬರಿಂದ ಉಗಿಸಿಕೊಂಡಿದ್ದರು. ಶಿವರಾಮೇಗೌಡರ ಮುಖಕ್ಕೆ ಮಂಗಳಾರತಿ ಮಾಡಿದ ಆ ಮಹಿಳೆ ಸ್ವರ್ಣಪ್ರಭಾಕರ್ ಈಗ ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷೆ. 'ಹಿಂದುಳಿದ ವರ್ಗಗಳ ಮಹಿಳೆಯರ ಉದ್ದಾರಕ್ಕೆಂದೇ ಹುಟ್ಟಿದಂತೆ ಮಾತನಾಡುವ ಪ್ರಫುಲ್ಲಾ ಮಧುಕರ್ ಸದನದಲ್ಲಿ ಕಾಲೇಜು ವಿದ್ಯಾರ್ಥಿನಿಯಂತೆ ಮೇಜು ಬಡಿಯುತ್ತಾ ವಿಧಾನಸೌಧದಲ್ಲಿ ಕ್ಷೇತ್ರದ ಜನರನ್ನು ಕಟ್ಟಿಕೊಂಡು ಓಡಾಡುವ ಶಾಸಕಿ ಜ್ಯೋತಿರೆಡ್ಡಿ" ಪಾಪ, ಜ್ಯೋತಿರೆಡ್ಡಿಯವರು ಎಷ್ಟು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಎಲ್ಲರಿಗೂ ಗೊತ್ತು. ಇಡೀ ಕ್ಷೇತ್ರಕ್ಕೆ ಗೊತ್ತಿದೆ. ಆದರೂ ಅವರ ಬಗ್ಗೆ ಈ ರೀತಿ ಬರೆಯುತ್ತಾರೆ. ನಂತರ ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ, ಶ್ರೀಮತಿ ಪ್ರಭಾವತಿ, ಶ್ರೀಮತಿ ರತ್ನಮಾಲಾ ಸವಣೂರು, ಶ್ರೀಮತಿ ಸುಮಾ ವಸಂತ್ ಇವರೆಲ್ಲರ ಮೇಲೆ ಬರೆದಿದ್ದಾರೆ. ಕೊನೆಗೆ ಜ್ಯೋತಿ ರೆಡ್ಡಿಯವರ ಬಗ್ಗೆ ಒಂದು ಸ್ಪೆಷಲ್ ಆರ್ಟಿಕಲ್ ಇದೆ. ಟೈಟಲ್ ಏನೆಂದರೆ "ಫ್ಯೂಡಲಿಸ್ಟ್ ಜ್ಯೋತಿರೆಡ್ಡಿ" ನಾಡಿಗೆ ನೀರು ನೀಡಿದ ದಿ. ನಜೀರ್‌ಸಾಬರು ಗೌರಿಬಿದನೂರಿನ ನಾಗಸಂದ್ರಕ್ಕೆ ಹೋದಾಗ ನಜೀರ್ ಮೇಲೆ ಕಲ್ಲು ತೂರಲಾಗಿತ್ತು. ದಲಿತರ ಮೇಲಿನ ದೌರ್ಜನ್ಯದ ದೂರಿನ ಮೇಲೆ ನಜೀರ್ ನಾಗಸಂದಕ್ಕೆ ಹೋಗಿದ್ದರು. ಅಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗಿದರು. ನಜೀರ್ ಮೇಲೆ ಕಲ್ಲು ತೂರಿದವರು ನಾಗಸಂದ್ರದ 'ರೆಡ್ಡಿ' ಕುಟುಂಬದವರು. ಆ ರೆಡ್ಡಿ ಕುಟುಂಬದ ಹೆಂಗಸೇ ಮುಂದೆ ನಜೀರ್‌ಸಾಬರ ಜನತಾದಳದಲ್ಲಿ ಟಿಕೆಟ್ ಪಡೆದು ಶಾಸಕಿಯಾಗಿರುವ ಜ್ಯೋತಿರೆಡ್ಡಿ. ಮಾನ್ಯ ಅಧ್ಯಕ್ಷರೆ, ಈ ಮೇಲಿನ ಮಾತುಗಳು ಕಮ್ಯುನಲ್‌ಗೆ ಬರುತ್ತದೆ.

MR. SPEAKER : But all those matters, ಆಯಿತು ಹೇಳಿ, ತಾವು ಪ್ರಿವಿಲೆಜ್‌ಗೆ ಬನ್ನಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : "ಮೊದಲು ಜಿಲ್ಲಾಪರಿಷತ್ ಮೆಂಬರ್ ಆಗಿದ್ದ ಜ್ಯೋತಿರೆಡ್ಡಿ ತನ್ನ ಕುಟುಂಬದ ಫ್ಯೂಡಲ್ ಹಿನ್ನೆಲೆಯಿಂದಲೇ ರಾಜಕಾರಣಕ್ಕೆ ಬಂದು, ಬಲಿಷ್ಠ ಜಾತಿಯ ಹಿನ್ನೆಲೆಯಿಂದ ರಾಜಕಾರಣಕ್ಕೆ ಬಂದು ಶಾಸಕಿಯೂ ಆಗಿಬಿಟ್ಟರು. ಈ ಫ್ಯೂಡಲ್ ಹಿನ್ನೆಲೆಯ ಜ್ಯೋತಿರೆಡ್ಡಿಗೆ ಕಮ್ಯುನಿಸ್ಟ್ ಹಿನ್ನೆಲೆಯ ಕೃಷ್ಣಾರೆಡ್ಡಿ ಗಾಡ್‌ಫಾದರ್. ಅಷ್ಟಿಷ್ಟು ದರ್ಬಾರು ಮಾಡುವುದರೊಂದಿಗೆ ಈಚೆಗೆ ಕೊಂಚ ಮಾತನಾಡುವುದನ್ನು ಕಲಿತಿರುವ ಜ್ಯೋತಿರೆಡ್ಡಿ ಬರ, ಬೆಂಗಾಡಿನಂತಿರುವ ತನ್ನ ಕ್ಷೇತ್ರದ ನದಿತೀರದ ಪಾತ್ರದಲ್ಲಿ ಆಂಧ್ರ ಕಂಟ್ರಾಕ್ಟರ್‌ಗಳು ಮರಳು ದೋಚುತ್ತಿದ್ದರೂ ಕಣ್ಣುಮುಚ್ಚಿಕೊಂಡು ಕಳ್ಳರಿಗೆ ಬೆಂಬಲಿಸುತ್ತಿರುವ ಜ್ಯೋತಿರೆಡ್ಡಿ ನಿಜಕ್ಕೂ ತಮ್ಮ ಕ್ಷೇತ್ರದ ಜನಕ್ಕೆ ಮಾಡುತ್ತಿರುವ ಘೋರ ದ್ರೋಹ" ಎಂದೆಲ್ಲ ಬರೆದಿದ್ದಾರೆ. ಇದು ಈ ಪೇಪರ್‌ನಲ್ಲಿ ಕೊಟ್ಟಿರತಕ್ಕಂಥದ್ದು ಅಂದರೆ ಮರಳು ಕಂಟ್ರಾಕ್ಟ್‌ನಲ್ಲಿ ಶಾಮೀಲಾಗಿದ್ದಾರೆಂದು ಕೊಟ್ಟಿದ್ದಾರೆ. ಶಾಸಕಿಯಾಗಿ ಮಾಡುತ್ತಿರತಕ್ಕಂಥ ಕೆಲಸ ಎಂದರೆ ಕಳ್ಳರಿಗೆ ಬೆಂಬಲಿಸತಕ್ಕಂಥ ಜ್ಯೋತಿರೆಡ್ಡಿ ಎಂದು ಬರೆದಿದ್ದಾರೆ. ನಂತರ 'ಮರಳಿಲ್ಲದ ನದಿಯಲ್ಲಿ ನೀರು ನಿಲ್ಲದೆ ರೈತರು ಕಂಗಾಲಾಗಿ ಬೀದಿಗೆ ಬಂದಿದ್ದರೂ ಜ್ಯೋತಿರೆಡ್ಡಿ ಪಂಚೇಂದ್ರಿಯಗಳನ್ನು ಕಳೆದುಕೊಂಡಿರುವುದು ದುರಂ.

(INTERRUPTIONS)

MR. SPEAKER : Please allow me sometime. I am trying to be very cautious and scrupulous.

ಶ್ರೀಮತಿ ಎನ್. ಜ್ಯೋತಿರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಸಂದರ್ಭದಲ್ಲಿ ಮರಳು ಕಂಟಾಕ್ಟ್‌ನ ಬಗ್ಗೆ ಮಾತನಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : "ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ" 1994ರಲ್ಲಿ ಗೆದ್ದು ಎರಡನೆಯ ಬಾರಿ ಕ್ಷೇತ್ರವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಿದ್ದಂತೆ ಅಮ್ಮನ ಜೊತೆ ಮಗ ರಮೇಶನೂ ಬೆಳೆದು, ಆತನ ಅರ್ಭಟ, ಅಟ್ಟಹಾಸ, ದಬ್ಬಾಳಿಕೆ, ಭ್ರಷ್ಟಾಚಾರವೆಲ್ಲಾ ಬಯಲಾಗ ತೊಡಗಿದವು. ತಮ್ಮ ಪತಿ ಬಂಡಿಸಿದ್ದೇಗೌಡರು ಉಳಿಸಿ ಬೆಳೆಸಿಕೊಂಡು ಬಂದಿದ್ದ ಸರಳತೆ, ಪ್ರಾಮಾಣಿಕತೆ, ಸ್ವಾಭಿಮಾನಕ್ಕೆ ತಿಲಾಂಜಲಿ ನೀಡಿ, ಇಂದು ತಮ್ಮ ಮಗ ರಮೇಶ ಎಂಬ ಅವಿವೇಕಿ ಯನ್ನು ಮುಂದಿನ ಎಂಎಲ್‌ಎ ಮಾಡುವ ಅಕಾಂಕ್ಷೆಯಿಂದ ರಾಜಾರೋಷವಾಗಿ ವಸೂಲಿಗಿಳಿದಿರುವುದು ಶ್ರೀರಂಗಪಟ್ಟಣದ ಜನತೆಯ ದುರಂತವೆನ್ನದೆ ವಿಧಿಯಿಲ್ಲ. ತಾಲ್ಲೂಕಿನ ಅಧಿಕಾರಿಗಳು, ಪೊಲೀಸರೆಲ್ಲಾ ಅಮ್ಮನ ಮಾತಿಗಿಂತ ಹೆಚ್ಚಾಗಿ ಮಗನ ಮಾತಿಗೆ ಬೆಲೆ ಕೊಡುತ್ತಿರುವುದನ್ನು, ಉಸ್ತುವಾರಿ ಎಂ.ಎಲ್‌ಎ. ಕೈಯಲ್ಲಿ ಇಡೀ ಕ್ಷೇತ್ರ ನರಳುತ್ತಿರುವುದನ್ನು ವಿರೋಧಿಸಿ ತಾಲ್ಲೂಕಿನ ರೈತಸಂಘದವರು ಸಾರ್ವಜನಿಕ ಪ್ರತಿಭಟನೆ ಏರ್ಪಡಿಸಿ ಖಂಡಿಸಿದ್ದಾರೆ. ಅಷ್ಟು ಇಷ್ಟು ಮರ್ಯಾದೆ ಉಳಿಸಿಕೊಂಡು ಜೋಪಡಿಯಲ್ಲಿ ವಾಸಿಸುತ್ತಿದ್ದ ಬಂಡಿಸಿದ್ದೇಗೌಡರ ಬದುಕನ್ನು ಒತ್ತಟ್ಟಿಗಿಟ್ಟ ಅಮ್ಮ-ಮಗ ಇಂದು ಅರಕೆರೆಯಲ್ಲಿ ನಲವತ್ತು ಲಕ್ಷ ರೂ.ಗಳ ಭವ್ಯ ಅರಮನೆಯಲ್ಲಿ ವಾಸಿಸುತ್ತಿರುವುದರ ರಹಸ್ಯವೇ ಇಂದು ಅವರ ಭ್ರಷ್ಟಾಚಾರವನ್ನು ಬಹಿರಂಗಗೊಳಿಸುತ್ತಿದೆ. ಜೊತೆಗೆ ವಿಜಯಲಕ್ಷ್ಮಮ್ಮನವರಿಗೆ ಮಾನ್ಯ ಎಚ್.ಡಿ. ದೇವೇಗೌಡರ

ಕೃಪಾಕಟಾಕ್ಷವಿರುವುದರಿಂದ ಇವರ ಸುಲಿಗೆಗೆ ದಾರಿ ಸುಗಮವಾಗಿದೆ. ಹಾಗೆಯೇ ಮಂಡ್ಯ ಜಿಲ್ಲೆಯಲ್ಲಿ ಕುಖ್ಯಾತರೆಂದೇ ಕರೆಯುವ ಕೆ.ಎನ್‌ನಾಗೇಗೌಡ ಹಾಗೂ ಶಿವರಾಮೇಗೌಡರೇ ವಿಜಯಲಕ್ಷ್ಮನವರ ಭಾರೀ ನಾಯಕರೆಂದರೆ ಈಕೆಯ ರಾಜಕೀಯದ ಗುರಿ-ದಾರಿಯನ್ನು ನಿರ್ಧರಿಸುವುದು ಕಷ್ಟವಾಗದು' ಮಾನ್ಯ ಅಧ್ಯಕ್ಷರೆ, ಇದು ನಮ್ಮ ಬಗ್ಗೆ ಆರೋಪಿಸಿ ಬರೆದಿದ್ದಾರೆಂದು ನಾನು ಹೇಳುತ್ತಿರುವುದು ಅಲ್ಲ. ಇದರಲ್ಲಿ ಬಂದಿರತಕ್ಕಂಥ ವಿಚಾರಕ್ಕೆ ಇತಿಶ್ರೀ ಆಗಲೇ ಬೇಕು. ಇನ್ನು ಮುಂದೆ ಯಾರೇ ಆಗಲಿ ಮಹಿಳೆಯರ ಬಗ್ಗೆ ಬರೆಯಬೇಕಾದರೆ ಯೋಚನೆ ಮಾಡಿ ಬರೆಯಬೇಕು. ಯಾರೇ ಮಹಿಳಾ ಶಾಸಕಿ ಎಂದು ಹೇಳುತ್ತಿಲ್ಲ, ಯಾವ ಒಬ್ಬ ಮಹಿಳೆಯ ಬಗ್ಗೆ ಬರೆಯಬೇಕಾದರೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಇಲ್ಲಿ ಅದಕ್ಕೆ ಏನಾದರೊಂದು ತೆರೆ ಎಳೆಯಲೇಬೇಕು. ಅದರ ಬಗ್ಗೆ ತೆರೆ ಎಳೆಯದಿದ್ದರೆ ಅದು ಇನ್ನು ಮುಂದೆಯೂ ನಡೆದುಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, 'ಕರ್ನಾಟಕ ಪ್ರೆಸ್ ಕೌನ್ಸಿಲ್ ಮಾಡುತ್ತೇವೆಂದು ಕಳೆದ ಅಧಿವೇಶನದಲ್ಲಿ ಹೇಳಿದ್ದಿರಿ. ಆದ್ದರಿಂದ ತಾವು ದಯಮಾಡಿ ಈ ಸದನದಲ್ಲಿ ಅನೌನ್ಸ್ ಮಾಡುವುದರ ಮುಖಾಂತರ ಕರ್ನಾಟಕ ಪ್ರೆಸ್ ಕೌನ್ಸಿಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

12.20 ಪಿ.ಎಂ.

ಇದಕ್ಕೆ ಕಾರಣಕರ್ತರಾದಂತಹ ಸನ್ಮಾನ್ಯ ಲಂಕೇಶ್‌ರವರನ್ನು, ಪಬ್ಲಿಷರ್‌ರವರನ್ನು, ಇದನ್ನು ಬರೆದಂಥವರು ತ್ಯಾಗರಾಜ್ ಎಂದ ಕೊನೆಯಲ್ಲಿ ಹಾಕಿದ್ದಾರೆ. ಅವರುಗಳನ್ನು ಈ ಸದನದ ಮುಂದೆ ಕರೆಸಬೇಕು. ನಂದನಾರೆಡ್ಡಿಯವರನ್ನು ಪ್ರಿವಿಲೇಜ್ ಕಮಿಟಿಯ ಮುಂದೆ ಕರೆಸಿದ್ದೆವು. ಆದರೆ ಇದುವರೆಗೂ ಸಹ ಅದರ ಬಗ್ಗೆ ವಿಚಾರಣೆಯಾಗಿಲ್ಲ, ಮುಗಿದಿಲ್ಲ. ಇದೇ ರೀತಿಯಲ್ಲಿ ಇದು ಆಗುವುದು ಬೇಡ. ಇನ್ನು ಎರಡು ವರ್ಷಗಳು ಕಾಯುವುದು ಬೇಡ. ಆದುದರಿಂದ ಈ ಸದನದಲ್ಲಿಯೇ ಇವರೆಲ್ಲರನ್ನೂ ಕರೆಸಿ ವಿಚಾರಣೆಯನ್ನು ಮಾಡಬೇಕೆಂದು ನನ್ನ ಆಗ್ರಹಪೂರ್ವಕವಾಗಿ, ಎಲ್ಲಾ ಮಹಿಳೆಯರಿಗೆ ಆಗಿರತಕ್ಕಂತಹ ಕಷ್ಟವನ್ನು, ಸಂಕಟವನ್ನು ತಮ್ಮ ಮುಂದೆ ತೋಡಿಕೊಂಡಿದ್ದೇನೆ. ತಾವು ಇಲ್ಲಿ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳು. ನಾನು ಮತ್ತು ನನ್ನ ಎಲ್ಲಾ ಮಹಿಳಾ ಶಾಸಕಿಯರೆಲ್ಲರೂ ಕೂಡ, ನಮ್ಮ ನಾಯಕರು ಇವತ್ತು ಯಾರು ಕೂಡ ಬಾವಿಗೆ ಬರಬಾರದೆಂದು ಹೇಳಿದ್ದರೂ ಕೂಡ, ಈ ವಿಚಾರದ ಬಗ್ಗೆ ವಿಚಾರಣೆಯಾಗಿ ಇದಕ್ಕೆ ಸಂಪೂರ್ಣವಾಗಿ ನ್ಯಾಯ ದೊರಕುವವರೆಗೆ ಸಂಪೂರ್ಣವಾಗಿ ಬಾವಿಯನ್ನು ಬಿಟ್ಟು ಹೊರಗೆ ಹೋಗುವುದಿಲ್ಲ ಎಂದು ತಮ್ಮ ಮೂಲಕ ಹೇಳಿ ನಾವೆಲ್ಲರೂ ಬಾವಿಗೆ ಬರುತ್ತಿದ್ದೇವೆ. ನಾನು ಎಲ್ಲಾ ಮಹಿಳೆಯ ಸಹೋದ್ಯೋಗಿಗಳನ್ನು ಕೂಡ...

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿಯವರೆ, ತಮ್ಮ ವಾದವನ್ನು ಮಂಡಿಸಿದ್ದೀರಿ ನಿಮ್ಮ ಇತರೆ ಎಲ್ಲಾ ಸಹೋದರಿಯರೆಲ್ಲರೂ ಸಹ ಸಹಿಯನ್ನು ಹಾಕಿದ್ದಾರೆ. ಅವರುಗಳು ಏನು ಹೇಳುತ್ತಾರೆಂದು ಅವರಿಗೂ ಕೂಡ ಹೇಳುವುದಕ್ಕೆ ಅವಕಾಶವನ್ನು ಕೊಡೋಣ. ಅನಂತರ you all can come to the well and do whatever you feel like.

+ ಶ್ರೀಮತಿ ಎನ್. ಜ್ಯೋತಿರೆಡ್ಡಿ (ಗೌರಿಬಿದನೂರು) : ಮಾನ್ಯ ಅಧ್ಯಕ್ಷರೇ, ಪ್ರಾಸ್ತಾವಿಕವಾಗಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇಲ್ಲಿ ಏನು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದಾರೆ ಅದಕ್ಕೆ ನಾವು ಎಲ್ಲಾ ಶಾಸಕಿಯರು ಸಹ ಬೆಂಬಲವನ್ನು ಕೊಡುತ್ತಾ, ಈಗಾಗಲೇ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ನಮ್ಮೆಲ್ಲರ ಮೇಲೆ ಪತ್ರಿಕೆಯಲ್ಲಿ ಬರೆದಿರುವ ಬಗ್ಗೆ ಹೇಳಿದ್ದಾರೆ. ನಾವು ಮೊದಲನೆಯ ಬಾರಿಗೆ ಶಾಸನ ಸಭೆಗೆ ಆಯ್ಕೆಯಾಗಿ ಬಂದಿದ್ದೇವೆ. ನಾವು ನಮ್ಮ ಕ್ಷೇತ್ರಗಳಲ್ಲಿ ಗೌರವದಿಂದ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಕ್ರಿಟಿಸಿಸಂ ಬೇಕು ಬೇಡವೆಂದು ನಾನು ಹೇಳುವುದಿಲ್ಲ. But, it should be a healthy, criticism. ನಮಗೆ ಒಂದು ಸ್ವಂತ ಪೇಪರ್ ಇದೆ, ಒಂದು ಪ್ರೆಸ್ ಇದೆ ಎನ್ನುವ ಒಂದು ಉದ್ದೇಶಕ್ಕಾಗಿ ಇಷ್ಟ ಬಂದಂತೆ ಬರೆಯುವುದಕ್ಕೆ ಪ್ರೆಸ್‌ನವರು ಹೊರಟಾಗ ನಾವುಗಳೂ ಕೂಡ ಸ್ವಲ್ಪ ತೀಕ್ಷ್ಣವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಗೆದ್ದು ಬಂದಿರತಕ್ಕಂತಹ ಎಲ್ಲಾ ಮಹಿಳೆ ಶಾಸಕರು 33 ಪರ್ಸೆಂಟ್‌ನಿಂದ ಏನೂ ಗೆದ್ದು ಬಂದಿಲ್ಲ. ಜನರಲ್ ಆಗಿ ಗೆದ್ದು ಬಂದಿದ್ದೇವೆ. ಮುಂದೆ ಕೂಡ ಗೆದ್ದು ಬರುವಂತಹ ಸಾಮರ್ಥ್ಯ ಇದೆ. ನಾವು ಇಲ್ಲಿ ಹೋರಾಟವನ್ನು ಮಾಡುತ್ತಿರುವಂಥದ್ದು ಯಾರೂ ರಾಜಕೀಯವಾಗಿ ಅಲ್ಲ. ಯಾರು ವಿದ್ಯಾವಂತರಾಗದೇ ಇರತಕ್ಕಂತಹ ಹೆಣ್ಣುಮಕ್ಕಳು ಇಂಥ ನಮ್ಮ decentralisation of power ಆಗಲಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಏನು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ, ಅದೇ ರೀತಿಯಲ್ಲಿ ಶಾಸನ ಸಭೆ, ಲೋಕಸಭೆಯಲ್ಲಿಯೂ ಸಹ 33 ಪರ್ಸೆಂಟ್ ಏನು ಹೆಣ್ಣುಮಕ್ಕಳು ಬಂದಾಗ ಅನಾದಿ ಕಾಲದಿಂದ ಮಹಿಳೆಯರು ಹಿಂದುಳಿದಿದ್ದರು, ಶೋಷಣೆಗೆ ಒಳಗಾಗಿದ್ದರು ಅವರುಗಳು ಮುಂದೆ ತರುವುದಕ್ಕೆ ಸ್ವಲ್ಪ ಅವಕಾಶ ಸಿಗುತ್ತದೆ ಎನ್ನುವಂತಹ ಉದ್ದೇಶದಿಂದ ನಾವುಗಳು ಹೋರಾಟವನ್ನು ಮಾಡುತ್ತಿದ್ದೇವೆಯೇ ಹೊರತು, ಅದನ್ನೇ ನಮ್ಮ ದೃಷ್ಟಿ ಇಟ್ಟುಕೊಂಡು ನಮ್ಮ ಕ್ಷೇತ್ರದ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೆಲಸವನ್ನು ಮಾಡುತ್ತಿಲ್ಲ. ನಾವು ಜನರಲ್ ಆಗಿ ಆಯ್ಕೆಯಾಗಿ ಬಂದಿದ್ದೇವೆ. ಪಕ್ಷದವರು ಪಾಲಿಸಿ ಮ್ಯಾಟರ್‌ನಲ್ಲಿ ಇನ್ನು ಜಾಸ್ತಿ ಹೆಚ್ಚು ಸೀಟ್‌ಗಳನ್ನು ಹೆಣ್ಣುಮಕ್ಕಳಿಗೆ ಕೊಡುವುದಾದರೆ ನಮಗೆ ರಿಸರ್ವೇಷನ್ ಬೇಕಾಗಿಲ್ಲ. We will fight and we will come out. ಈಗ ಪತ್ರಿಕೆಯಲ್ಲಿ 33 ಪರ್ಸೆಂಟ್‌ಗಾಗಿಯೇ ಇಲ್ಲಿಗೆ ಬಂದಿದ್ದೇವೆಂದು ಬರೆದಿದ್ದಾರೆ. ಅದನ್ನು ನಾವು ಖಂಡಿಸುತ್ತಿದ್ದೇವೆ. ನಮ್ಮ ಸಹೋದ್ಯೋಗಿಗಳು ಯಾರು ಇದ್ದಾರೆ ನಮ್ಮ ರೀತಿಯಲ್ಲಿ ಬರುವುದಕ್ಕೆ ಆಗಲೇ ಇರತಕ್ಕಂಥವರು... ಇನ್ನೊಂದು ಆಗುತ್ತದೆ. ಏನು 33 ಪರ್ಸೆಂಟ್ ನಾವು ಆಯ್ಕೆಯಾಗಿ ಬರುತ್ತೇನೆ. ಆ 33 ಹೆಣ್ಣು ಮಕ್ಕಳು ಸಮಾಜದಲ್ಲಿ ಸೇವೆಯನ್ನು ಮಾಡುವುದನ್ನು ಕಲಿಯುತ್ತಾರೆ ಎನ್ನುವಂತಹ ಒಂದು ಉದ್ದೇಶದಿಂದ ಕೇಳುತ್ತಿದ್ದೇವೆಯೇ ಹೊರತು ನಮ್ಮ ಸ್ವಾರ್ಥಕ್ಕಾಗಿ, ನಾವು ದೊಡ್ಡವರು ಆಗಬೇಕೆಂಬ ಉದ್ದೇಶಕ್ಕಾಗಿ ಅಲ್ಲ. ತುಂಬಾ ಮಹಿಳೆಯ ಶಾಸಕಿಯವರು ಒಳ್ಳೆಯ ಫ್ಯಾಮಿಲಿ ಬ್ಯಾಗ್ರೌಂಡ್‌ನಿಂದ ಬಂದಿರತಕ್ಕಂಥವರು, ಸ್ವಾತಂತ್ರ ಹೋರಾಟಗಾರರ ಫ್ಯಾಮಿಲಿನಿಂದಲೂ ಸಹ ಬಂದಿದ್ದೇವೆ. ಆದರೆ ಈ ರೀತಿಯಾದಂತಹ ಮಾಹಿತಿಗಳನ್ನು ಪೇಪರ್‌ನಲ್ಲಿ ಕೊಟ್ಟಾಗ ನಾವು ನಮ್ಮ ಕ್ಷೇತ್ರದಲ್ಲಿ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದರೆ ಜನರಿಗೆ ಈ ಪತ್ರಿಕೆಗಳು ಎಂಥದ್ದು ಎಂದು ಗೊತ್ತಿದೆ. ಇವತ್ತು ಜನರಿಗೆ ಯೋಚನೆಯನ್ನು ಮಾಡುವಷ್ಟು ಶಕ್ತಿ ಜನರಿಗೆ ಇದೆ. ಆದರೂ ಸಹ

ಒಳ್ಳೆಯ ಮನೆತನದಿಂದ ಬಂದಿರತಕ್ಕಂತಹ ಹೆಣ್ಣುಮಕ್ಕಳು ನಾಳೆಯದಿವಸ ಸದನವನ್ನು ಮುಗಿಸಿಕೊಂಡು ನಮ್ಮ ಕ್ಷೇತ್ರಕ್ಕೆ ಹೋದಾಗ ಅಭಿಮಾನದಿಂದಾಗಲಿ, ಕೋಪದಿಂದಾಗಲಿ ನಮ್ಮನ್ನು ಪ್ರಶ್ನಿಸಿದಾಗ ಆಗ ಉತ್ತರವನ್ನು ಕೊಡುವುದಕ್ಕೆ ಮತ್ತು ಕೆಲಸವನ್ನು ಮಾಡುವುದಕ್ಕೆ ನಮಗೆ ಕಷ್ಟವಾಗುತ್ತದೆ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಇವತ್ತು ಪ್ರಾರ್ಥಿಸುತ್ತಾ, ಇನ್ನು ಮರಳಿನ ಬಗ್ಗೆ ಬರೆದಿದ್ದಾರೆ, ನಾನು ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದಾಗಿನಿಂದಲೂ ಸಹ ಪಿನಾಕಿನಿ ನದಿಯಲ್ಲಿ ಮರಳನ್ನು ಎತ್ತಬಾರದೆಂದು ಹೋರಾಟವನ್ನು ಮಾಡುತ್ತಿದ್ದೇನೆ. ನನ್ನ ಪಕ್ಷದ ಕಾರ್ಯಕರ್ತರು ಮೂರು ಜನರು ಅಲ್ಲಿ ಸತ್ತು ಹೋದರು, ಸಾಯಿಸಿಬಿಟ್ಟರು. ಅವತ್ತಿನಿಂದ ಇವತ್ತಿನವರೆಗೂ ಆ ಮರಳಿನ ಬಗ್ಗೆ ಹೋರಾಟವನ್ನು ನಡೆಸುತ್ತಿದ್ದೇವೆ. ಇಂತಹ ಸಮಯದಲ್ಲಿ, ಮೊನ್ನೆಯೂ ಸಹ ಏನು ಸರ್ಕಾರದವರು ರಾಯಲ್ಟಿಯನ್ನು ಕಟ್ಟಿ ಮರಳನ್ನು ತೆಗೆದುಕೊಳ್ಳಬಹುದೆಂದು ಮಾಡಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ನಾನು ನೇರವಾಗಿ ಹೋಗಿ ಹೋರಾಟ ಮಾಡಿದರೆ ರಾಜಕೀಯವಾಗುತ್ತದೆ ಎನ್ನುವ ಉದ್ದೇಶಕ್ಕಾಗಿ ಅಲ್ಲಿ ಪ್ರಜಾ ಸೇನೆ ಎಂದು ಒಂದು ಆರ್ಗನೈಸೇಷನ್ ಮಾಡಿಕೊಂಡು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಅದರ ಬಗ್ಗೆ ಮೊನ್ನೆ ಸಹ ಪ್ರಸ್ತಾಪವನ್ನು ಮಾಡಿದ್ದೆ. ಅದಕ್ಕಾಗಿ ಒಂದು ದಿವಸ ಫಿಕ್ಸ್ ಮಾಡಿ ಚರ್ಚೆಯನ್ನು ಮಾಡೋಣ ಎಂದು ಮಾನ್ಯ ಸಿಂಧ್ಯರವರು ಸರಿಯಾದಂತಹ ವ್ಯವಸ್ಥೆಯನ್ನು ಮಾಡೋಣವೆಂದು ಹೇಳಿದ್ದಾರೆ. ಇನ್ನು feudalistic Jyothi Reddy - he is not person to decide as to who is a socialist or who is a feudal. ಎಂದು ಹೇಳಿ ತೀರ್ಮಾನಿಸುವುದಕ್ಕೆ ನನಗೆ ಜನರು ಇದ್ದಾರೆ. ಜನರಿಗೆ ಗೊತ್ತು ನಾನೇನು ಎಂದು. ನಜೀರ್‌ಸಾಬ್‌ರವರ ಮೇಲೆ ನಮ್ಮೆಲ್ಲರಿಗೂ ತುಂಬಾ ಗೌರವ ಇತ್ತು. ಅವತ್ತು ನಮ್ಮ ಅಧಿಕಾರ ವಿಕೇಂದ್ರೀಕರಣಕ್ಕಾಗಿ ಅವರು ಬಂದಾಗ he is the man who had asked me to contest those elections. ಅವತ್ತು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಕಂಟೆಸ್ಟ್ ಮಾಡಿದೆ. ಇಡೀ ಕರ್ನಾಟಕದಲ್ಲಿ ಯೂನಾನಿಮಸ್ ಆಗಿ ಗೆದ್ದೆ. I am the only woman to come out unanimously during the decentralisation process. ಅದು ತಮಗೆ ಗೊತ್ತಿದೆ. ಅಂಥ ನಜೀರ್‌ಸಾಬ್‌ನ್ನು ಹೊಡೆಸಿದ್ದೇವೆ ಎಂದೆಲ್ಲಾ ಬರೆದಿದ್ದಾರೆ. ಇಂಥ ಪತ್ರಿಕೆಗಳನ್ನು ತಾವು ಬ್ಯಾನ್ ಮಾಡಬೇಕು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹೇಳಿದಂತೆ ನಾವು ಲಾ ಗ್ರ್ಯಾಜ್ಯುಯೇಟ್ ಅಲ್ಲ. ಲಾ ರೂಲ್ಸ್ ಎಲ್ಲಾ ನನಗೆ ಗೊತ್ತಿಲ್ಲದೇ ಇರಬಹುದು. ಆದರೂ ಸಹ ಇಂತಹ ಪೇಪರ್‌ನ್ನು ಸಮಾಜ ಬಾಯ್ಕಟ್ ಮಾಡಬೇಕು. Hereafterwards, Lankesh Patrike should not be distributed throughout the State. ಇಷ್ಟು ಹೇಳಿ, ಮೊದಲನೆಯದಾಗಿ ಇಲ್ಲಿ ಪ್ರೆಸ್ ಸಹೋದರರು ಕುಳಿತಿದ್ದಾರೆ. ಅವರಾದರೂ ಇಂಥ ತಲೆ ಕೆಟ್ಟ ಪ್ರೆಸ್‌ನವರನ್ನು ಸರಿ ಮಾಡಬೇಕು. First of all, they should know what is the meaning of women? Wealth of a man is a woman; wisdom of a man is a woman; Holiness of a man is a woman. ಇದನ್ನು ಅವರಿಗೆ ಹೇಳಿಬಿಟ್ಟು ಹುಟ್ಟುವಾಗ ಕಪ್ಪಾಗಿ ಹುಟ್ಟಿದ್ದರೆ ಅದು ಏನು ನಮ್ಮ ಇಚ್ಛೆಯಾ? Is there any choice to take birth? Commenting on beautiful women and ugly women is non-sense. ಅಷ್ಟು ಕಾಮನ್‌ಸೆನ್ಸ್ ಇಲ್ಲದೇ ಇರತಕ್ಕಂತಹ ಪತ್ರಿಕೆಗಳನ್ನು ನಮ್ಮ

ರಾಜ್ಯದಲ್ಲಿ ಡಿಸ್ಟ್ರಿಬ್ಯೂಟ್ ಮಾಡದೇ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು. ಸೀರೆ ಉಟ್ಟಿದ್ದು ತಪ್ಪು, ತಲೆಗೆ ಸೆರಗು ಹಾಕಿಕೊಂಡಿರುವಂಥದ್ದು ತಪ್ಪು I am having a daughter who is a teenage girl, doing her House-suregeonship; I am having a teenage daughter who is doing her law graduation. ಏನೂ ತಿಳಿಯದ ಹೆಣ್ಣು ಮಕ್ಕಳನ್ನು ಇಟ್ಟುಕೊಂಡಿರುವಂತಹ ತಾಯಂದಿರು ನಾವು, ಮೊಮ್ಮಕ್ಕಳನ್ನು ಇಟ್ಟುಕೊಂಡಿರುವಂತಹ ತಾಯಂದಿರು ನಾವು. ಇವನು ಇಷ್ಟ ಬಂದಂತೆ ಬರೆದರೆ ನಾವು ಕೇಳುವುದಕ್ಕೆ ಆಗುತ್ತದೆಯೇ ? We will go to streets and teach him a lesson. Don't think women are incapable of doing it. For that matter, we are out for anything. If we mind, we will do whatever we want to.

MR. SPEAKER : Please do not get excited.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ : ಈಗ ಸರ್ಕಾರದ ಉದ್ದೇಶ ಏನಿದೆ? ನಾಳೆ ನಮ್ಮ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕ ಮಹಿಳಾ ಸಂಘಗಳನ್ನು ಒಂದು ಮಾಡಿ ಈ ಪತ್ರಿಕೆಗಳಿಗೆ ನಾಮಾರ್ಥ ಇಲ್ಲದಂತೆ ಮಾಡುತ್ತೇವೆ. if we mind, take it from me. ಇಷ್ಟು ಹೇಳಿ ಏನು ಇವತ್ತು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹಕ್ಕುಚ್ಯುತಿ ಮಂಡಿಸಿದ್ದಾರೆ ಅದನ್ನು ಪೂರ್ಣ ಬೆಂಬಲಿಸುತ್ತೇನೆ. ಮಾನ್ಯ ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದರು. ಇವತ್ತು ನಾವು ಹೆಣ್ಣುಮಕ್ಕಳಿಗೆ 33 ಪರ್ಸೆಂಟ್ ರಿಸರ್ವೇಷನ್ ಕೊಡಬೇಕೆಂದು ಹೊರಟಿದ್ದೇವೆ. ಅದರ ಹಿನ್ನೆಲೆಯಲ್ಲಿ ಉದ್ದೇಶ ಯಾವುದೇ ಇರಲಿ, ರಾಜಕೀಯ ಏನೇ ಇರಲಿ. ಆದರೆ ಯಾರು ಮುಂದೆ ಬರುತ್ತಾರೆ? ನೀವು ಸೀಟ್ ಕೊಡಬೇಕೆಂದರೆ ನಿಮಗೆ ಹೆಣ್ಣುಮಕ್ಕಳು ಸಿಗುವುದಿಲ್ಲ. We came on our own. ನಾವು ಏನೂ ರಿಸರ್ವೇಷನ್‌ನಲ್ಲಿ ಬಂದಿಲ್ಲ. ನಮ್ಮ ಜನ ನಮಗೆ ಅಭಿಮಾನ ಇಟ್ಟು ಓಟು ಕೊಟ್ಟು ಕಳುಹಿಸಿದ್ದಾರೆ. ಆ ಜನರಿಗೆ ಗೊತ್ತಿದೆ, ನಾವು ಯಾರು ಏನು ಎಂದು. ಈ ಮಾತನ್ನು ಬರೆದು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬಂದು ಮಾತನಾಡಲಿ ಆ ಮನುಷ್ಯನಿಗೆ ಗೊತ್ತಾಗುತ್ತದೆ. ಇಲ್ಲಿ ಕುಳಿತುಕೊಂಡು ಬರೆಯುವುದಲ್ಲ. So my sincere request to you Sir is that this entire House should take it seriously. ನಮ್ಮ ಹೆಣ್ಣುಮಕ್ಕಳಿಗೆ ಮಾನ ಮರ್ಯಾದೆ ಏನು ಇದೆ, ಪ್ರಿಸ್ಟೀಜ್ ಏನು ಇದೆ ಅದನ್ನು ಉಳಿಸುವುದಕ್ಕೆ ತಾವೆಲ್ಲರೂ ಸಹಾಯ ಮಾಡುತ್ತೀರಿ, ಅದರಲ್ಲಿ ತಾವು ಭಾಗಿಗಳಾಗುತ್ತೀರೆಂದು ತಿಳಿದುಕೊಂಡಿದ್ದೇವೆ. ಆ ಪತ್ರಿಕಾ ಸಂಪಾದಕ ಯಾರೇ ಇರಲಿ; ನಾವು ರೇಷ್ಮೆ ಸೀರೆ ಉಟ್ಟು.... ಅವನ ಹೆಂಡತಿ ರೇಷ್ಮೆ ಸೀರೆ ಮಾರುತ್ತಿದ್ದಾಳೆಯೇ? ಹಾಗಿದ್ದರೆ ನಾವೆಲ್ಲಾ ಹೋಗಿ ಅಲ್ಲಿನೇ ತೆಗೆದುಕೊಳ್ಳುತ್ತಿದ್ದೆವು, ಅದಕ್ಕಾಗಿ ಬರೆಯುತ್ತಾನೆ. ನಾವು ಹೋಗಿ ಅವನ ಹತ್ತಿರ ತೆಗೆದುಕೊಂಡಿದ್ದರೆ ಚೆನ್ನಾಗಿ ಬರೆಯುತ್ತಿದ್ದ. ರೇಷ್ಮೆಸೀರೆಗಳನ್ನೇ ಉಟ್ಟುಕೊಳ್ಳಬೇಕಾಗಿತ್ತು. ಆಗ Who is he to discuss on these things? ಸೀರೆ ಉಟ್ಟಿದ್ದೇವೆ, ಸೆರಗು ಹಾಕಿದ್ದೇವೆ. Who is that man? ಆದುದರಿಂದ ದಯವಿಟ್ಟು ತಾವು ಇದನ್ನು ಗಮನಿಸಬೇಕು. ಇವತ್ತು ಈ ಸದನದಲ್ಲಿ ನಾವು ಹೆಣ್ಣುಮಕ್ಕಳು ಒಂದು ಸೇವೆ ಮಾಡಬೇಕೆಂದು ಬಂದಿದ್ದೇವೆ, ಸಂಪಾದನೆ ಮಾಡಿಕೊಂಡು ಮಜಾ ಮಾಡಬೇಕೆಂದು ಯಾವ ಹೆಣ್ಣು ಮಕ್ಕಳೂ ಬಂದಿಲ್ಲ. ನಮಗೆ ಒಂದು ಅವಕಾಶ ಸಿಕ್ಕಿದೆ.

ದೊಡ್ಡವರು ನೀವು ದೊಡ್ಡ ಮನಸ್ಸು ಮಾಡಿ ನಮಗೆ ಒಂದು ಟಿಕೆಟ್ ಕೊಟ್ಟು ನಿಲ್ಲಿಸಿದ್ದೀರಿ, ನಾವು ಗೆದ್ದುಕೊಂಡು ಬಂದಿದ್ದೇವೆ. ನಮ್ಮ ಜನರಿಗೆ ಸಹಾಯವಾಗಲಿ ಎಂಬ ಉದ್ದೇಶಕ್ಕೆ ಬಂದಿದ್ದೇವೆಯೇ ಹೊರತು ದುಡ್ಡು ತೆಗೆದುಕೊಂಡು 40 ಚದುರ... ಇದೆಲ್ಲಾ ಬರೆದಿದ್ದಾರಲ್ಲಾ, 40 ಚದುರ ಮನೆ ಕಟ್ಟಿಸಿಕೊಂಡು ಯಾರಾ ಓಡಾಡಬೇಕೆಂದು ಬಂದಿಲ್ಲ. ನಾವು ಏನು ಎಂದು ಜನರಿಗೆ ಗೊತ್ತಿದೆ. ಓಟು ಕೊಟ್ಟ ಜನರಿಗೆ ನಾವು ಏನು ಎಂದು ಗೊತ್ತಿದೆ. ಆದರೆ ಈ ಮನುಷ್ಯನಿಗೆ ಗೊತ್ತಾಗಬೇಕಲ್ಲಾ. ಆದುದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ತಾವು ನಮ್ಮ ಪ್ರಿವಿಲೇಜ್ ಮೋಷನ್‌ಗೆ ಕೊಡಬೇಕು, ಆತನನ್ನು ಇಲ್ಲಿಗೆ ಕರೆಸಬೇಕು, ಆತ ಓಪನ್ ಆಗಿ ಅಪಾಲಜಿ ಕೇಳಬೇಕು. ಅಲ್ಲಿಯವರೆಗೆ ನಮ್ಮ ಹೋರಾಟ ನಡೆಸುತ್ತೇವೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆಲ್ಲಾ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ ನಮಸ್ಕಾರ.

+ ಶ್ರೀಮತಿ ಡಿ. ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಅಧ್ಯಕ್ಷರೆ, ಈ ಪತ್ರಿಕೆಯನ್ನು ಓದಿ ನಮಗೆಲ್ಲಾ ಬಹಳ ಬೇಜಾರಾಯಿತು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮತ್ತು ಶ್ರೀಮತಿ ಜ್ಯೋತಿ ರೆಡ್ಡಿಯವರು ಅದರ ಬಗ್ಗೆ ಮಾತನಾಡಿದರು. ನಾನು ಒಂದು ಸಾರಿಯೂ ಕೌನ್ಸಿಲರ್ ಆಗಲಿಲ್ಲ. ನಾನು ಪ್ರಥಮ ಬಾರಿಗೆ ಇಲ್ಲಿಗೆ ಆರಿಸಿ ಬಂದಿದ್ದೇನೆ. ನಾನು ದಲಿತರ ಮಹಿಳೆ ಎಂದು, ಎಸ್. ಸಿ.ಎಸ್.ಟಿ. ಮಹಿಳೆ ಎಂದು ನನ್ನ ಬಗ್ಗೆ `black lady' ಎಂದು ಹೇಳಿದ್ದಾರೆ. Though I am black, my soul is white. ನಾವು ನಮ್ಮ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ನಮ್ಮ ಕ್ಷೇತ್ರದ ಬಗ್ಗೆ ಯಾರಾದರೂ ನಮಗೆ ಬುದ್ಧಿ ಹೇಳಿ, ಅಮ್ಮ ಈ ರೀತಿ ಇದೆ ಎಂದರೆ ನಾವು ತಿದ್ದುಪಡಿ ಮಾಡಿಕೊಳ್ಳುತ್ತೇವೆ. ಯಾವ ರೀತಿಯಲ್ಲೂ ನಾವು ನಮ್ಮ ಕ್ಷೇತ್ರದಲ್ಲಿ ದುರುಪಯೋಗ ಮಾಡಲಿಲ್ಲ. ಯಾವ ಕಛೇರಿಯನ್ನೂ ದುರುಪಯೋಗ ಮಾಡಲಿಲ್ಲ. ಬ್ರಿಡ್ಜ್ ಆಗಲಿ, ರೋಡ್ ಆಗಲಿ, ಸ್ಲಂ ಆಗಲಿ ಅದರ ಬಗ್ಗೆ ನಾವು ಯಾವುದಕ್ಕೂ ಇನ್‌ವಾಲ್ವ್ ಆಗಲಿಲ್ಲ. ಶ್ರೀಮತಿ ಜ್ಯೋತಿಯವರು ಸರಿಯಾಗಿ ನೋಡಿ ಬರೆಯಬೇಕೆಂದರು. ಹೆಣ್ಣುಮಕ್ಕಳು ಯಾವುದಕ್ಕೂ ಹೋಗುವುದಿಲ್ಲ. ಆದರೂ ನಮ್ಮ ಬಗ್ಗೆ ರೇಷ್ಮೆ ಸೀರೆ ಉಟ್ಟುಕೊಂಡು ಹೇಮಾವತಿ ಬ್ಯೂಟಿ ಪಾರ್ಲರ್‌ಗೆ ಹೋಗುತ್ತಾಳೆಂದು ಬರೆದಿದ್ದಾರೆ. ನಮಗೆ ತಿಂಡಿ, ಊಟ ಮಾಡುವುದಕ್ಕೆ ಸಮಯ ಇಲ್ಲ. ನಮಗೆ ಏತಕ್ಕೆ ಬ್ಯೂಟಿ ಪಾರ್ಲರ್? ಬ್ಯೂಟಿ ಪಾರ್ಲರ್‌ಗೆ ಹೋಗಿ ನಮಗೆ ಏನು ಬ್ಯೂಟಿ ಬರಬೇಕು? ನಮಗೆ ಬ್ಯೂಟಿ ಬೇಕಾಗಿಲ್ಲ. ಸುಮ್ಮಸುಮ್ಮನೆ ಈ ರೀತಿ ಬರೆದು, ನಮ್ಮ ಶ್ರೀಮತಿ ವಿಜಯಲಕ್ಷ್ಮಿ ಅವರ ಬಗ್ಗೆ, ಹಿರಿಯರ ಬಗ್ಗೆ ತುಂಬ ವಿಧವಾಗಿ ಮಾತನಾಡಿದ್ದಾರೆ. ಏಕೆಂದರೆ ಅವರಿಗೆ ಪೆನ್ನು, ಪೇಪರ್, ಪೆನ್ಸಿಲ್ ಎಲ್ಲಾ ಇದೆ ಎಂದು ಏನು ಬೇಕಾದರೂ ಬರೆಯುವುದಕ್ಕೆ ನಾವು ಅಂಥ ಹೆಣ್ಣುಮಕ್ಕಳಲ್ಲ. ನಾವು ಒಳ್ಳೆಯ ಕುಟುಂಬದಿಂದ ಬಂದಿದ್ದೇವೆ. ಈ ನಮ್ಮ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಂಡು ಈ ರೀತಿ ಒಬ್ಬೊಬ್ಬ ಹೆಣ್ಣುಮಗಳ ಮೇಲೆ ಈ ರೀತಿ ಬರೆದರೆ ನಮ್ಮ ಕ್ಷೇತ್ರದ ಜನರು ನೋಡಿ ಏನು ತಿಳಿದುಕೊಳ್ಳುತ್ತಾರೆ? ನಿನ್ನೆ ಕೆಲವರು ಪತ್ರಿಕೆ ನೋಡಿ ಅಮ್ಮ ನಿಮ್ಮ ಫೋಟೋ ಬಂದಿದೆ ಅಂದರು. ನಮ್ಮ ಮನಸ್ಸಿಗೆ ಬಹಳ ನೋವಾಯಿತು. ಏನು ಬರೆದಿದ್ದಾರೆಂದು ಒಳಗಡೆ ತೆಗೆದು ನೋಡಿದರೆ ಬಹಳಷ್ಟು ಅಸಹ್ಯವಾಗಿ ಬರೆದಿದ್ದಾರೆ. ಅದನ್ನು ನೋಡಿ ನನಗೆ ತುಂಬಾ ಬೇಜಾರಾಗುತ್ತಿದೆ. ಈ ಸಭೆಯಲ್ಲಿ ಅವರನ್ನು ಕರೆದು

ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದಕ್ಕೆ ಸರಿಯಾದ ರಿಸಲ್ಟ್ ಬರಬೇಕು. ಇಲ್ಲದಿದ್ದರೆ ನಾವು ಧರಣಿ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀಮತಿ ಜ್ಯೋತಿಯವರೆ, all of you must take it easy. ನೀವು ಇವತ್ತು ಇದನ್ನು ಕಳುಹಿಸಿಕೊಟ್ಟಿದ್ದೀರಿ. ನಿಮಗೆ ಅವಕಾಶ ಕೊಡುತ್ತಿದ್ದೇನೆ. The whole house is with you. You are all our dearest sisters. Please don't get excited. There is no need for any of you to feel helpless. The entire House stands behind you. Please do not get excited. ನಾವು ತಾಯಿಯ ಗರ್ಭದಲ್ಲಿ ಹುಟ್ಟಿರತಕ್ಕವರು. ನಮ್ಮ ಜೊತೆ ಅಕ್ಕತಂಗಿಯವರು ಇದ್ದಾರೆ. ನಿಮ್ಮ ಭಾವನೆಗಳು ನಮಗೆ ಅರ್ಥವಾಗುತ್ತವೆ. ದಯವಿಟ್ಟು ಭಾವಪರವಶರಾಗಬೇಡಿ.

ಶ್ರೀ ಜಿ. ಬಿ. ಶಿವಕುಮಾರ್ : ಈಗ ಮಾತನಾಡಿರತಕ್ಕವರು ಎಲ್ಲರೂ ಸಾಕಷ್ಟು ಹೇಳಿದ್ದಾರೆ. ನಾವೆಲ್ಲರೂ ಅವರ ಭಾವನೆಗಳಲ್ಲಿ ಭಾಗಿಯಾಗಿದ್ದೇವೆಂದು ತಾವು ಹೇಳಿದ್ದೀರಿ. ಮತ್ತೆ ಅವರು ಮಾತನಾಡತಕ್ಕದ್ದು.

MR. SPEAKER : Please, let each one of them speak out. ಯಾರಿಗಾದರೂ ಈ ಸದನದಲ್ಲಿ, ಶ್ರೀಮತಿ ಜ್ಯೋತಿರೆಡ್ಡಿಯವರಿಗೆ ಇಷ್ಟು ಸಮರ್ಥ ರೀತಿಯಲ್ಲಿ ಹೇಳುವುದಕ್ಕೆ ಬರುತ್ತದೆಂಬ ಕಲ್ಪನೆ ಇತ್ತೇ? It is the opportunity that makes a leader. She came out today in such beautiful expressions. Let us see what is hidden in each one of them. ಶ್ರೀಮತಿ ಹೇಮಾವತಿಯವರು ಒಂದು ಮಾತು ಹೇಳಿದರಲ್ಲಾ ``my colour may be black, my soul is white" Should we insult a woman from scheduled caste in a more inferior manner than this? Let each one of them speak. Let the world know what is going on. I don't want to stop any of the lady Members from speaking. I want each one of them to speak.

+ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಬಹಳಷ್ಟು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇಲ್ಲಿ ನಾವು ನಮ್ಮ ಕ್ಷೇತ್ರದಲ್ಲಿ ಏನೇನು ಕೆಲಸವಾಗಿದೆ ಎಂದು ಚರ್ಚೆ ಮಾಡುವುದರ ಜೊತೆಗ ಹೆಣ್ಣುಮಕ್ಕಳಿಗೆ ಎಷ್ಟು ಅನಾದರಣೀಯವಾಗಿ ಕಾಣುತ್ತಿದ್ದಾರೆಂಬುದು ಪತ್ರಿಕೆಯವರಿಗೆ ಗೊತ್ತಾಗಿದೆ. ನಾನು ಪ್ರತಿಯೊಬ್ಬರನ್ನೂ ಕೂಡ ಅಣ್ಣ ಎಂದು ಮಾತನಾಡಿಸುತ್ತಿದ್ದೇನೇ ಹೊರತು ಬೇರೆ ರೀತಿ ಮಾತನಾಡಿಸುತ್ತಿರಲಿಲ್ಲ. ಆದರೂ ಕೂಡ ಅಣ್ಣ ಎಂಬ ರೀತಿಯಲ್ಲಿ ಪತ್ರಿಕೆಯಲ್ಲಿ ಕಾಣಲಿಲ್ಲ. ಒಂದು ಪೂರ್ತಿ ಪುಟ ಹೆಣ್ಣುಮಗಳು ಈ ರೀತಿ ನಡೆದುಕೊಳ್ಳಬೇಕೆಂದು ಮಾಡಿದ್ದರೆ ನಿಜವಾಗಿ ಅದಕ್ಕೆ ಅಪ್ರೀಷಿಯೇಟ್ ಮಾಡಿ ನೀವು ಈ ರೀತಿ ಒಳ್ಳೆಯದು ಮಾಡಿದ್ದೀರಿ, ನೀವು ಒಳ್ಳೆಯ ಗೈಡೆನ್ಸ್ ಕೊಟ್ಟಿದ್ದೀರೆಂದು ಹೇಳಬಹುದಾಗಿತ್ತು. ನಾವೆಲ್ಲಾ ಹಳ್ಳಿಯಿಂದ ಬಂದ ಹೆಣ್ಣುಮಕ್ಕಳು. ನಮಗೆ ಈ ರೀತಿ ಅವಮಾನ ಮಾಡುವುದೆಂದರೆ ಬಹಳ ದುಃಖಕರವಾದ ವಿಷಯ. ಈ ವಿಧಾನಸಭಾ ಅಧಿವೇಶನ ಮುಗಿದ ತಕ್ಷಣ ನಾವು ನಮ್ಮ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ. ಆಗ ನಮ್ಮ

ಕ್ಷೇತ್ರದಲ್ಲಿ ಬೇರೆ ಜನ ನಮ್ಮನ್ನು ಎಷ್ಟು ಕೀಳು ಮಟ್ಟದಲ್ಲಿ ಕಂಡು ಇವರದ್ದು ಏನು ಮಹಾ ಅಂದಾಗ ಅವರು ನಮಗೆ ಎಷ್ಟು ಲಘುವಾಗಿ ಕಾಣುತ್ತಾರೆಂಬುದು ಈಗಾಗಲೇ ನಿಮಗೆ ಗೊತ್ತಾಗಿದೆ. ಆಗಲೇ ನಾವು ಹೇಳಿದ್ದೇವಲ್ಲಾ, ಎಷ್ಟು ಆತ್ಮೀಯವಾಗಿ ಅಂದರೆ ಕೆಲವು ಸಂದರ್ಭದಲ್ಲಿ ಹೆಣ್ಣು ಮಕ್ಕಳು ಎಷ್ಟೆಷ್ಟು ಒಳ್ಳೆಯ ರೀತಿಯಲ್ಲಿ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ್ದಾರೆಂದು ನೀವೆಲ್ಲರೂ ಹೇಳಿದ್ದೀರಿ. ಈಗ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ, ಏಕೆಂದರೆ ಈ ಸದನದಲ್ಲಿ ಈ ರೀತಿ ಮಾಡಿದ್ದಾರೆಂದು ಕೇವಲವಾಗಿ ನಮ್ಮನ್ನು ಅವರು ಎಷ್ಟು ನಿಕೃಷ್ಟವಾಗಿ ಕಾಣುತ್ತಿದ್ದಾರೆಂದು ನಿಮಗೆಲ್ಲರಿಗೆ ಗೊತ್ತಾಗಿದೆ. ಒಂದು ಮಾತು ಅದರಲ್ಲಿ ಬರೆದಿದ್ದಾರೆ, 50ನೇ ಸ್ವಾತಂತ್ರೋತ್ಸವದ ಹುಟ್ಟುಹಬ್ಬವನ್ನು ಅವರು ಎಷ್ಟು ವಿಬೃಂಜಣೆಯಿಂದ ಆಚರಿಸಿದರು ಎಂದು. ಯಾರು ಅಷ್ಟೊಂದು ವಿಜೃಂಭಣೆಯಿಂದ ಆಚರಿಸಿದರೋ ಗೊತ್ತಾಗಲಿಲ್ಲ. ಆದರೆ ನಾನು ಆ ಹೆಸರನ್ನು ಉಳಿಸಿಕೊಳ್ಳಬೇಕು ಎಂದರೆ ಈಗಾಗಲೇ ಶ್ರೀ ಬಂಡಿಸಿದ್ದೇಗೌಡರ ಬಗ್ಗೆ ಕೂಡ ಬರೆದಿದ್ದಾರೆ. ಆ ಹೆಸರು ಉಳಿಸಿಕೊಳ್ಳಬೇಕು, ಅವರು ಹೇಳುತ್ತಿರುವ ಹೆಸರಿಗೆ ನಾವು ಕಪ್ಪು ಚುಕ್ಕೆ ಇಡಬಾರದೆಂದು ಈ ರೀತಿ ಲಾಭ ಪಡೆಯಬೇಕಾಗಿಲ್ಲ. ನಾವು ಮುಂಚೆ ಗದ್ದೆಗೆ ಹಿಟ್ಟು ತೆಗೆದುಕೊಂಡು ಹೋಗಿ ಕಳೆ ಕಿತ್ತು ಜೀವನ ಮಾಡಬೇಕಾಗಿಲ್ಲ. ಆದರೆ ನಾವು ಶಾಸಕರಾದ ಮೇಲೆ ಮನೆಕಟ್ಟಬಾರದೇ ಮದುವೆ ಮಾಡಬಾರದೇ? ನೀವಾದರೂ ಹೇಳಿ. ನಾನು ಮನೆ ಕಟ್ಟಿರುವುದು 40 ಚದುರ ಮನೆ ಇದೆ ಎಂದು ಯಾರೂ ನಂಬುವುದಿಲ್ಲ. ಏಕೆಂದರೆ ಅಲ್ಲಿರತಕ್ಕ ಎಲ್ಲರಿಗೂ ಗೊತ್ತಿದೆ. ನಾನು ಬಹಳಷ್ಟು ಚಿಕ್ಕ ಮನೆಯಲ್ಲಿದ್ದೆ. ಈಗ ಮಗನ ಮದುವೆ ಮಾಡಿದ ಮೇಲೆ ಸ್ವಲ್ಪ ದೊಡ್ಡ ಮನೆಗೆ ಹೋಗಿದ್ದೇವೆ. ಅವರೂ ಕೂಡ ಮನುಷ್ಯತ್ವದಲ್ಲಿ ಇರುವವರು. ಅವರಿಗೂ ಹೆಂಡತಿ ಮಕ್ಕಳು ಎಲ್ಲಾ ಇದ್ದಾರೆ. ಇದೊಂದು ಸಣ್ಣ ವಿಷಯವನ್ನು ದೊಡ್ಡದಾಗಿ ಬರೆದಾಗ ನಮ್ಮ ಮನಸ್ಸಿಗೆ ಎಷ್ಟು ನೋವಾಗುತ್ತದೆ.

ಈಗಾಗಲೇ ನಮ್ಮ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಬಹಳಷ್ಟು ಚೆನ್ನಾಗಿ ಇದರ ಬಗ್ಗೆ ಮಾತನಾಡಿದ್ದಾರೆ. ಅಂದರೆ, ನಾವ್ಯಾರೂ ಲಾ ಮಾಡಿಲ್ಲ. ಆದರೂ ಕೂಡ, ನಾವು ಇಷ್ಟು ವಿದ್ಯಾವಂತರಾಗಿದ್ದು ಅಂದರೆ ಇನ್ನು ಮುಂದೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ ಇರಬಹುದು, ಅಲ್ಲಿಗೂ ಕೂಡ ಅವರ್‍ಯಾರೂ ಎಲೆಕ್ಷನ್‌ಗೆ ನಿಂತುಕೊಳ್ಳುವುದಕ್ಕೆ, ರಾಜಕೀಯಕ್ಕೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಅವರ ಮನಸ್ಸಿಗೆ ಈ ವಿಚಾರ ಬಂದು, ನಾವುಗಳು ಧೈರ್ಯವಾಗಿ ನಿಮ್ಮ ಕೆಲಸ ಏನಿದೆ ಅದನ್ನು ಮಾಡಿ, ನಿಮ್ಮ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ನಿಮಗೆ ಒಳ್ಳೆಯ ಹೆಸರು ತರುತ್ತೇವೆಂದು ಅವರನ್ನು ಹುರಿದುಂಬಿಸಿ, ನಾವು ಕರೆದುಕೊಂಡು ಬಂದು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗೆ ನಿಲ್ಲಿಸಿದಾಗ, ಏನಾಗುತ್ತದೆಂದರೆ, ಅವರದ್ದೇ ಸರಿಯಿಲ್ಲ, ಮೇಲ್ಮಟ್ಟದ್ದು, ಕೆಳಮಟ್ಟದ್ದು, ಅನ್ನುವ ಅಭಿಪ್ರಾಯ ಬರುತ್ತದೆ. ಆದ್ದರಿಂದ, ದಯಮಾಡಿ ಇಲ್ಲಿರುವವರೆಲ್ಲರೂ ಕೂಡ ಯಾವುದೇ ಒಂದು ಪಾರ್ಟಿಯಾಗಲೀ, ಅಧಿಕಾರ ವರ್ಗದವರಾಗಲೀ, ಪತ್ರಿಕೋದ್ಯಮದಲ್ಲಿರುವವರೂ ಕೂಡ, ಅವರಿಗೂ ಕೂಡ ಹೆಂಡತಿ-ಮಕ್ಕಳಿದ್ದಾರೆ, ಹೆಣ್ಣು ಮಕ್ಕಳಿದ್ದಾರೆ. ಆದರೆ, ಈ ತರಹ ನಮ್ಮನ್ನು ಇಷ್ಟೊಂದು ನಿಕೃಷ್ಟವಾಗಿ ಕಾಣಬಾರದು ಎಂದು ತಮಗೆಲ್ಲರಿಗೂ ಕೇಳಿಕೊಂಡು, ನಾವು ನಮ್ಮ ಬಗ್ಗೆ ಅಂದರೆ ನಮ್ಮಲ್ಲಿರುವುದನ್ನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಗಂಡ ತೀರಿಕೊಂಡಿದ್ದರೂ ಕೂಡ, ನಾನು ಇಲ್ಲಿ ಬಂದು ಅಂದರೆ ಅವರ ಋಣ ತೀರಿಸುವುದಕ್ಕೆ, ಓಟು ಕೊಟ್ಟು ನನ್ನನ್ನು ಈ ಸ್ಥಾನದಲ್ಲಿ

ಕೂರಿಸಿರುವ ಜನರ ಋಣ ತೀರಿಸುವುದಕ್ಕೋಸ್ಕರ ನಾನು ಇಷ್ಟೊಂದು ಕಷ್ಟಪಟ್ಟು, ಕೆಲಸ ಮಾಡುತ್ತಿದ್ದೇನೆ. ಪ್ರತಿಯೊಂದು ಆಫೀಸ್‌ನಲ್ಲೂ ಕೇಳುತ್ತಾರೆ, ಏನಮ್ಮಾ ನೀನು ಈಗ ಛೇರ್ಮನ್ ಆಗಿದ್ದರೂ, ಆಫೀಸಿಗೆ ಹೋಗುವುದನ್ನು ಬಿಡುವುದಿಲ್ಲವಲ್ಲಾ ಎಂದು. ಬೇಕಾದರೆ ಅಧಿಕಾರ ವರ್ಗದಲ್ಲಿರುವವರನ್ನು ಕೇಳಿ. ಅಂಥದ್ದರಲ್ಲಿ, ನಾನು ಕಾನ್‌ಸ್ಟಿಟ್ಯುಯೆನ್ಸಿನಲ್ಲಿ ಕೆಲಸ ಮಾಡಿಕೊಂಡು, ನನ್ನ ಕೆಲಸವನ್ನು ನಾನು ಮಾಡಿಕೊಂಡು ಹೋಗುತ್ತಿರಬೇಕಾದರೆ, ಇಷ್ಟೊಂದು ನಿಕೃಷ್ಟವಾಗಿ ಬರೆಯುವುದು ಖಂಡಿತಾ ತಪ್ಪು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಏನು ಮಾತನಾಡಿದ್ದಾರೆ ಅದನ್ನು ನಾನೂ ಕೂಡ ಬೆಂಬಲಿಸಿ ತಾವು ನಮಗೆ ರಕ್ಷಣೆ ಕೊಡಬೇಕೆಂದು ನಿಮಗೆಲ್ಲರಿಗೂ ಕೇಳಿಕೊಂಡು, ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ) : ಸನ್ಮಾನ್ಯ ಅಧ್ಯಕ್ಷರೆ, ನನ್ನ 40 ವರ್ಷಗಳ ರಾಜಕೀಯ ಜೀವನದಲ್ಲಿ ಬಹುಶಃ ನಾನು 8 ಚುನಾವಣೆಗಳನ್ನೆದುರಿಸಿದ್ದೇನೆ. ಕಾರ್ಪೊರೇಷನ್‌ನಿಂದ ಪಾರ್ಲಿಮೆಂಟರಿವರೆಗೂ ಕೂಡ ಕೆಲವು ಚುನಾವಣೆಗಳಿಗೆ ನಿಂತು ಗೆದ್ದಿದ್ದೇನೆ ಮತ್ತು ಸೋತಿದ್ದೇನೆ. ಪತ್ರಿಕಾ ರಂಗದಲ್ಲಿ, ಇವೆಲ್ಲಾ ಪತ್ರಿಕೆಗಳೂ ಹುಟ್ಟುವುದಕ್ಕಿಂತ ಮುಂಚೆ, ಒಳ್ಳೆಯ ಮನೆತನದಿಂದ ಬಂದಿರತಕ್ಕ ಹೆಣ್ಣುಮಗಳು ನಾನು. ನಾನು ಪತ್ರಿಕೆ ನಡೆಸಿದ್ದೇವೆ, ಪ್ರೆಸ್‌ನಲ್ಲಿ ಮೊಳೆ ಜೋಡಿಸಿದ್ದೇನೆ, ಪ್ರೂಫ್ ಕರೆಕ್ಷನ್ ಮಾಡಿದ್ದೇವೆ, ಭವಾನ್ಸ್ ಜರ್ನಲ್ ತರಹ ಪ್ರತಿಭಾವಂತವಾಗಿರತಕ್ಕ ಮಾಸ ಪತ್ರಿಕೆಯನ್ನು ಹೊರಡಿಸಿದ್ದೇನೆ. ಪತ್ರಿಕೆ ಬಗ್ಗೆ, ಕನ್ನಡದ ಬಗ್ಗೆ, ನನ್ನ ಮನೆತನದ ಬಗ್ಗೆ ಮಾತನಾಡತಕ್ಕ ಹಕ್ಕು ಅಥವಾ ಹೇಳತಕ್ಕ ಹಕ್ಕು ಕರ್ನಾಟಕದಲ್ಲಿರತಕ್ಕ ಎಲ್ಲರಿಗೂ ಇದೆ ಎಂದು ನಾನು ಇವತ್ತು ಒಪ್ಪಿಕೊಳ್ಳುತ್ತಿದ್ದೇನೆ. ಆದರೆ, ಕನ್ನಡ ಸಂಸ್ಕೃತಿ ಇಲಾಖೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ನನಗೆ ವಹಿಸಿದಾಗ, ನಾನು ಅದಕ್ಕೆ ಸಮರ್ಪಕವಾಗಿ ಕೆಲಸ ಮಾಡುತ್ತೇನೆಯೋ, ಇಲ್ಲವೋ ಎಂದು ನನ್ನನ್ನು ಮುಖ್ಯಮಂತ್ರಿಗಳು ಪ್ರಶ್ನಿಸಬೇಕು. ಆ ಹಕ್ಕು ಅವರಿಗಿದೆ. ಈ ಇಲಾಖೆಯ ಜವಾಬ್ದಾರಿಯನ್ನು ಕೊಟ್ಟಿದ್ದೇನೆ, ಈ ಇಲಾಖೆ ಮೇಲೆ ಸಮರ್ಪಕವಾಗಿ ನನ್ನ ಮಂತ್ರಿಮಂಡಲದಲ್ಲಿ ಮಂತ್ರಿಗಳು ಕೆಲಸ ಮಾಡುತ್ತಾರೆಯೇ ಎಂದು ಕೇಳತಕ್ಕ ಹಕ್ಕನ್ನು, ಶಿಕ್ಷೆ ಮಾಡತಕ್ಕ ಹಕ್ಕನ್ನು, ಬುದ್ಧಿ ಹೇಳತಕ್ಕ ಹಕ್ಕನ್ನು, ನಮಗೆ ಕೊಟ್ಟಿರತಕ್ಕ ಇಲಾಖೆಯ ಬಗ್ಗೆ ಇವತ್ತು ಏನು ಗೌರವ ಕೊಟ್ಟಿದ್ದಾರೆ, ಕೇಳತಕ್ಕ ಹಕ್ಕು ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಬಹುಶಃ ನಮ್ಮ ಸಂಸ್ಕೃತಿ, ಎಂದರೆ ಪತ್ರಿಕೆ ಎಂದು ಇವತ್ತು ಹೇಳುತ್ತಾರೆ. ದೇಶದ ಯಾವುದಾದರೊಂದು ಶಕ್ತಿ ಎಂದು ಹೇಳಿದರೆ, ಅದು "ದಿ ಪ್ರೆಸ್" ಎಂದು ಇವತ್ತಿನ ದಿವಸ ಹೇಳುತ್ತಾರೆ. ಇವತ್ತು ಏನಾದರೂ ದೇಶದ ಶಕ್ತಿ ಏನಿದೆ Press is the power of nation ಎಂದು ಹೇಳುವಾಗ, ಪತ್ರಿಕೆಗಳು ಬೇಕು, ಮಾಧ್ಯಮಗಳು ಬೇಕು. ಇವತ್ತು ಪತ್ರಿಕೆಗಳಿಂದ ದೇಶದ ಶಕ್ತಿ ಬೆಳೆಯುತ್ತದೆ, ರಾಜಕೀಯ ಪಕ್ಷಗಳ ಶಕ್ತಿ ಬೆಳೆಯುತ್ತದೆ, ಸಾರ್ವಜನಿಕ ಜೀವನದಲ್ಲಿ ಶಕ್ತಿ ಬೆಳೆಯುತ್ತದೆ ಎಂದಾಗ, ಇವತ್ತಿನ ದಿವಸ ಪತ್ರಿಕೆಗಳು ಕನ್ನಡಿ ಇದ್ದ ಹಾಗಿರಬೇಕು. ಸಾರ್ವಜನಿಕ ಜೀವನದಲ್ಲಿ ಕನ್ನಡಿ ಆಗಬೇಕು. ಪತ್ರಿಕೆಗಳು ದೇಶದ ಪ್ರಗತಿಯ ಕಣ್ಣಾಗಬೇಕು. ಇವೆಲ್ಲಾ ಪತ್ರಿಕೆಗಳು ಇಂಥ ಯೆಲ್ಲೋಯಿಸಂ ಪತ್ರಿಕೆಗಳು ಹುಟ್ಟುವುದಕ್ಕಿಂತ ಮೊದಲು ನಾನು ಪತ್ರಿಕೆ ನಡೆಸಿದ್ದೇನೆ. ಇತ್ತೀಚೆಗೆ ಬಂದಿರತಕ್ಕ ಇಂದಿನ ಯಲ್ಲೋ ಪತ್ರಿಕೆ, ಈ ಪತ್ರಿಕೆ ಬಗ್ಗೆ ನನಗೆ ಬಹಳ ಗೌರವವಿದೆ. ಪತ್ರಿಕಾ ಪ್ರೆಸ್‌ನಲ್ಲಿ ಕುಳಿತಿರುವವರು,

ಎಲ್ಲರ ಬಗ್ಗೆ ನಾನು ಬಹಳ ಗೌರವವನ್ನು ಇಟ್ಟುಕೊಂಡಿದ್ದೇನೆ. ಕೆಲವು ಪತ್ರಿಕೆಗಳು ಇವತ್ತಿನ ದಿವಸ ಮಹಿಳೆಯರನ್ನೂ ಚಾರಿತ್ರ್ಯವಧೆ ಮಾಡಿ, ತಮ್ಮ ಪತ್ರಿಕೆಯ ಶಕ್ತಿಯನ್ನು ಬೆಳೆಸುವುದಕ್ಕೆ ಹೊರಟಾಗ, ತಮ್ಮ ಪತ್ರಿಕೆಯ ಸರ್ಕ್ಯುಲೇಷನ್‌ನ್ನು ಜಾಸ್ತಿ ಮಾಡುವುದಕ್ಕಾಗಿ ಹೋದಾಗ, it is high time ನಾನು ಬಹಳ ವರ್ಷಗಳಿಂದ ನಾನೇನಾದರೂ ಪತ್ರಿಕೆ ಬಗ್ಗೆ ಮಾತನಾಡಿದ್ದರೆ, ಕೊಚ್ಚೆ, ಸಗಣಿ ಮೇಲೆ ಕಲ್ಲು ಒಗೆದ ಹಾಗೆ ಎಂದು ಬಾಯಿ ಮುಚ್ಚಿಕೊಂಡು ಸುಮ್ಮನಿದ್ದೆ. ಸುಮಾರು 20-25 ವರ್ಷಗಳಿಂದ ನಾನು ಇದರ ಬಗ್ಗೆ ಚಕಾರ ಶಬ್ದವನ್ನೆತ್ತಿರಲಿಲ್ಲ. ಬಹುಶಃ ಇದೇ ಪತ್ರಿಕೆಯವರು ನಾನು ಶಾಸಕಿಯಾದಾಗ, ನಿಮ್ಮ ಕ್ಷೇತ್ರದಲ್ಲಿ ಏನು ಕೆಲಸ ಮಾಡಿದ್ದೀರಿ, ಪಟ್ಟಿ ಕೊಡಿ ನಾವು ಬರೆಯುತ್ತೇವೆಂದರು. ನಾನು 4 ಕೆಲಸ ಮಾಡಿ, 40 ಕೆಲಸ ಮಾಡಿದ್ದೇನೆಂದು ಹೇಳಬಹುದು, ನಿಮ್ಮ ವರದಿಗಾರರನ್ನು ನನ್ನ ಕ್ಷೇತ್ರಕ್ಕೆ ಕಳುಹಿಸಿ, ವರದಿಗಾರನಾಗಿ ಹೋಗುವುದು ಬೇಡ, ಗೂಢಾಚಾರನಾಗಿ ನೀವು ಅವನನ್ನು ಕಳುಹಿಸಿ, ನಾನು ಏನೇನು ಕೆಲಸ ಮಾಡಿದ್ದೇನೆಂದು ತಿಳಿದುಕೊಂಡು ಬಂದು ಬರೆಯಲಿ ಎಂದು ಹೇಳತಕ್ಕ ಒಬ್ಬ ಶಾಸಕಿಯಾಗಿದ್ದೇನೆ ನಾನು ಇವತ್ತಿನ ದಿವಸ. ಆದರೆ, ಇವತ್ತು ಬಹುಶಃ ಇಂದು ನಾನು ಕೆಲವು ಮಹನೀಯರನ್ನು ಆ ಪತ್ರಿಕೆ ಬಗ್ಗೆ ಕೇಳಿದೆ, ಅದಕ್ಕೆ ಅವರು ತಾವು ಆ ಪತ್ರಿಕೆಯನ್ನು ಓದುವುದೇ ಇಲ್ಲ ಎಂದು ಹೇಳಿದರು. ಖಂಡಿತಾ ನನಗೆ ಬಹಳ ಸಂತೋಷವಾಯಿತು. ಈ ಸಭೆಯಲ್ಲಿರತಕ್ಕ ಸಹೋದರ-ಸಹೋದರಿಯರು ಅಂಥ ಪತ್ರಿಕೆಗಳನ್ನು ಓದದೇ ಇರುವುದೇ ಕ್ಷೇಮವೆಂದು ಹೇಳಿದ ಹಾಗೆ ಬಹುಶಃ ಈ ಪತ್ರಿಕೆ ಬಗ್ಗೆ ಎಷ್ಟು ಗೌರವ ಇಟ್ಟುಕೊಂಡಿದ್ದಾರೆ ಈ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಎನ್ನುವುದು ಅರ್ಥವಾಗುತ್ತಿದೆ. ಒಂದು ಕಡೆ ವೀರಪ್ಪನ್ ಫೋಟೋ, ಇನ್ನೊಂದು ಕಡೆ ನಮ್ಮೆಲ್ಲರ ಫೋಟೋ. ಈ ಪತ್ರಿಕೆಯ ಹೆಡ್ಡಿಂಗ್ ಇವತ್ತು. ತಾವೆಲ್ಲಾ ಬುದ್ಧಿಜೀವಿಗಳು, ಬೆಂಗಳೂರಿನಲ್ಲಿರುವವರು. ಕರ್ನಾಟಕದ ಕೊನೆಯ ಹಳ್ಳಿಯಲ್ಲಿ ಪತ್ರಿಕೆ ಹೋಗಿ ಯಾರಾದರೂ ಮೂಢ ಮತ್ತು ಓದು ಬರೆದಿರುವ ಹೆಣ್ಣುಮಗಳು ಇದನ್ನು ನೋಡಿದಾಗ, ಆ ಹೆಣ್ಣುಮಗಳಿಗೆ ನಮ್ಮ ಬಗ್ಗೆ ಆಗತಕ್ಕ ಕಲ್ಪನೆಯಾದರೂ ಏನಾಗಬಹುದು ಎಂದು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಈ ಪತ್ರಿಕೆ ಹಳ್ಳಿಯಲ್ಲಿ ಹೋದಾಗ, ಅದನ್ನು ನೋಡಿದಾಗ ಅವರ ಅಭಿಪ್ರಾಯ ಏನಾಗಬಹುದು? ಇವತ್ತು ಬಹಳ ಜನ ಮುಗ್ಧರಿದ್ದಾರೆ. ನಾನು ಸುದೈವದಿಂದ ಏನೋ ಕಲಿತು, ಒಳ್ಳೆಯ ಮನೆತನದಲ್ಲಿ ಹುಟ್ಟಿ, ರಾಜಕೀಯ ಜೀವನದಲ್ಲಿ ಸತತವಾಗಿ ಇವತ್ತು ಜೀವಂತವಾಗಿ ರಾಜಕೀಯ ಜೀವನದಲ್ಲಿ 40 ವರ್ಷಗಳ ಕಾಲ ಬದುಕಿದ್ದೇನೆ. ಸೋಲು-ಗೆಲುವು, ಬೇರೆ ಇಚ್ಛೆ. ಯಾವುದೇ ಕಳಂಕವಿಲ್ಲದೆ, ಇದ್ದೇವೆ ತಪ್ಪಿದ್ದರೆ ಬರೆಯಲಿ ನಾನು ಒಪ್ಪಿಕೊಳ್ಳುತ್ತೇನೆ. ಪತ್ರಿಕೆಗಳು ಬೇಕು, ಕ್ರಿಟಿಸಿಸಂ ಬೇಕು, ಆದರೆ, ಹೆಲ್ತಿ ಕ್ರಿಟಿಸಿಸಂ ಬೇಕು. ಇವತ್ತು ನನ್ನ ಆಫೀಸ್ ವಿಧಾನಸೌಧದ ಮೂರನೆಯ ಮಹಡಿಯಲ್ಲಿದೆ. ನನ್ನ ಇಲಾಖೆ ಬಗ್ಗೆ ಕರ್ನಾಟಕದ ತುಂಬಾ ಹಬ್ಬಿರುತ್ತದೆ. ಯಾವುದೋ ತಾಲ್ಲೂಕಿನ ನನ್ನ ಇಲಾಖೆಯವನು ಯಾವನೋ ಕ್ಲರ್ಕ್ ತಪ್ಪು ಮಾಡಿದಾಗ ಅದನ್ನು ನನ್ನ ಗಮನಕ್ಕೆ ತರತಕ್ಕದ್ದು, ಪತ್ರಿಕೆಗಳ ಕರ್ತವ್ಯ. ನಿಮ್ಮ ಇಲಾಖೆಯಲ್ಲಿ ಇಂಥ ತಪ್ಪು ನಡೆಯುತ್ತಿದೆ, ನಿಮ್ಮ ಅಧಿಕಾರಿಗಳು ಇಂಥ ತಪ್ಪು ಮಾಡುತ್ತಿದ್ದಾರೆ, ಅದನ್ನು ಸರಿಪಡಿಸತಕ್ಕ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳತಕ್ಕದ್ದನ್ನು ನಾನು ಸ್ವಾಗತಿಸುತ್ತೇನೆ. We want such things to enlighten us. ಇಂಥ ತಪ್ಪುಗಳು ನಡೆಯುತ್ತಿದೆ, ನಿಮ್ಮ ಗಮನಕ್ಕೆ ತರುತ್ತಿದ್ದೇವೆ, ಸರಿಪಡಿಸಿ ಎಂದು

ಹೇಳಿದಾಗ, ನಾನು ಸ್ವಾಗತಿಸುತ್ತೇನೆ. ಆದರೆ, ಇವತ್ತು ಮಹಿಳೆಯರನ್ನು ಅದರಲ್ಲೂ ವಿಶೇಷವಾಗಿ ರಾಜಕೀಯದಲ್ಲಿರತಕ್ಕ ಮಹಿಳೆಯವರನ್ನು ಇವತ್ತು ನಾವೇನು ಸತತ ಹೋರಾಟ ಮಾಡುತ್ತಿದ್ದೇವೆ, ನಮ್ಮ ಒಂದು ಮೀಸಲಾತಿಯನ್ನು ಇವರು ಬರೆದಿರುವುದು, ಕೇವಲ 33 ಪರ್ಸೆಂಟ್‌ಗಾಗಿ ಹೋರಾಟ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಸ್ವಾಮಿ, ಇವತ್ತು ಜ್ಯೋತಿ ರೆಡ್ಡಿಯವರು ಹೇಳಿದರು. ಶ್ರೀಮತಿ ಜ್ಯೋತಿ ರೆಡ್ಡಿಯವರು ಮೊದಲನೇ ಸಲ ಆರಿಸಿ ಬಂದಿದ್ದಾರೆ. ನಾನು ಈ ಸಭೆಯಲ್ಲಿ ಹೇಳುತ್ತೇನೆ, ರಾಜಕೀಯದಲ್ಲಿರುವವರೆಗೂ ನನಗೆ ಮೀಸಲಾತಿಯಲ್ಲಿ ಟಿಕೆಟ್ ಕೊಡಬೇಡಿ, ನಾನು ಜನರಲ್ ಸೀಟಿನಲ್ಲಿ ಗೆದ್ದು ಬರುತ್ತೇನೆ. This is my challenge. ನನಗಾಗಿ ಮೀಸಲಾತಿ ಹೋರಾಟ ಮಾಡುತ್ತಿಲ್ಲ ಇವತ್ತು. ಸನ್ಮಾನ್ಯ ಸಹೋದರ ಶ್ರೀ ಮೊಯಿಲಿಯವರು ಒಂದು ಮಾತು ಹೇಳಿದರು, ಇವತ್ತು ಒಳ್ಳೆಯ ಮನೆತನದಲ್ಲಿರತಕ್ಕ ಬುದ್ಧಿವಂತ ಹೆಣ್ಣುಮಕ್ಕಳು ರಾಜಕೀಯಕ್ಕೆ ಬರುವುದಕ್ಕೆ ಹಿಂದೇಟು ಹಾಕುತ್ತಾರೆ ಎಂದು ಏಕೆ, ಇಂಥ ಒಂದು ಕ್ಯಾರೆಕ್ಟರ್ ಅಸಾಸಿನೇಟ್ ಮಾಡತಕ್ಕದ್ದನ್ನು ಪತ್ರಿಕೆಗಳು ಬರೆದಾಗ, ಯಾವ ಮನೆತನದಲ್ಲಿರತಕ್ಕ ಅಣ್ಣ-ತಮ್ಮಂದಿರು ತಮ್ಮ ತಾಯಿ, ತಂಗಿ ಮಡದಿಯಾಗಿರಬಹುದು, ಅವರ್‍ಯಾರನ್ನೂ ರಾಜಕೀಯಕ್ಕೆ ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಅಂದರೆ, ರಾಜಕೀಯದಲ್ಲಿ ಬಂದಿರತಕ್ಕ ಹೆಣ್ಣುಮಗಳಿಗೆ ಯಾವ ಒಂದು ಹಿನ್ನೆಲೆ ಇಲ್ಲ, ಮೌಲ್ಯಗಳಿಲ್ಲ, ಚಾರಿತ್ರ್ಯ ಇಲ್ಲ, ಇದು ಈ ತರಹ ಬೆಳವಣಿಗೆ ಪತ್ರಿಕೆಗಳಲ್ಲಿ ಬರೆದರೆ, ನಾನು ಇವತ್ತು ನಮ್ಮ ಸ್ವಾರ್ಥಕ್ಕಾಗಿ ಮಾತನಾಡುತ್ತಿಲ್ಲ. ಶ್ರೀಮತಿ ಪ್ರಮೀಳಾ ಮತ್ತು ನಮಗೆ 40 ವರ್ಷಗಳ ರಾಜಕೀಯದಲ್ಲಿ ನಮ್ಮ ಚರ್ಮಗಳು ದಪ್ಪಗಾಗಿಬಿಟ್ಟಿದೆ. ಯಾವ ಪತ್ರಿಕೆಯವರು ಏನಾದರೂ ಬರೆದರೂ ಇವತ್ತಿನ ದಿವಸ ನಾವು ಹೆದರುವುದಿಲ್ಲ. We stand, we know it, we know the capacity of this press. ಕೆಲವು ಪತ್ರಿಕೆಗಳವರು ಬಹಳ ಅಭಿಮಾನದಿಂದ ಹೇಳುತ್ತಿರುತ್ತಾರೆ. ಆದರೆ, ಈ ಪತ್ರಿಕೆಗಳು ನಮ್ಮನ್ನು ಮುಂದಿಟ್ಟುಕೊಂಡು, ಅಂದರೆ ರಾಜಕೀಯದಲ್ಲಿರತಕ್ಕ ಹೆಣ್ಣುಮಕ್ಕಳನ್ನು ಮುಂದಿಟ್ಟುಕೊಂಡು ತಮ್ಮ ಒಂದು ಪತ್ರಿಕೆಯನ್ನು ಬೆಳೆಸುವುದಕ್ಕೆ ಹೊರಟಿದ್ದಾರಲ್ಲಾ, ಅದಕ್ಕೆ ಕಡಿವಾಣ ಹಾಕದಿದ್ದರೆ, ನಿಜವಾಗಿ it is high time ನಮಗೆ ಮಾತ್ರವಲ್ಲ, ನಾಳೆ ನಿಮ್ಮ ಮನೆಯಲ್ಲಿರತಕ್ಕ, ಕ್ಷೇತ್ರದಲ್ಲಿರತಕ್ಕ, ಪ್ರತಿಯೊಂದು ಜಿಲ್ಲಾ ಪಂಚಾಯಿತಿ, ಡೀ-ಸೆಂಟ್ರಲೈಸ್ ಮಾಡಿದ್ದೇವೆ. ಲಕ್ಷಾಂತರ ಹೆಣ್ಣುಮಕ್ಕಳನ್ನು ಇವತ್ತು ನಾವು ಸಾರ್ವಜನಿಕ ಜೀವನದಲ್ಲಿ ತರುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ, ರಾಜಕೀಯ ಜೀವನದಲ್ಲಿ ತರುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ನಾಳೆ ದಿವಸ ರಾಜಕೀಯಕ್ಕೆ ಹೆಣ್ಣುಮಕ್ಕಳು ಬಂದಾಗ ಅವರ ಪರಿಸ್ಥಿತಿ ಏನಾದೀತು ಎನ್ನತಕ್ಕದ್ದನ್ನು ಇವತ್ತು ಈ ಒಂದು ಹೌಸ್ ಮುಖಾಂತರವಾಗಿ ನಾನು ಭಿನ್ನವಿಸಿಕೊಳ್ಳುತ್ತೇನೆ. ಶ್ರೀಮತಿ ಪ್ರಮೀಳಾರವರು ಪ್ರಿವಿಲೆಜ್ ಮೋಷನ್ ತಂದಿದ್ದಾರೆ. ಇವತ್ತು ಪ್ರಿವಿಲೆಜ್ ಮೋಷನ್ಸ್‌ನಲ್ಲಿ ಏಕೆ ಬಹಳವಾಗಿ ನಾವು ಹೇಳುತ್ತಿದ್ದೇವೆಂದರೆ, ಇದಕ್ಕೆ ಸ್ಪಷ್ಟವಾಗಿ ಯಾವುದಕ್ಕೆ ತಾವು ಪ್ರಿವಿಲೆಜ್ ಎಂದು ಹೇಳಿದ ಹಾಗೆ, ಬಹುಶಃ ನಾನು ಇಲ್ಲಿ ಒಂದು ಹೇಳಿದರೆ, ಯಾವುದಕ್ಕೆ ಹಕ್ಕು ಇದೆ, ಇವತ್ತು ಬ್ರೀಚ್ ಆಫ್ ಪ್ರಿವಿಲೆಜ್ ಆಗುತ್ತದೆ ಎನ್ನುವುದನ್ನು ನಾನು ಒಂದೇ ಒಂದು ಮಾತು ಹೇಳಿದರೆ, "Speeches and writings reflecting on the House or its Committees or Members are punished by the House as a contempt on the

principle that such acts" tend to obstruct the House in the performance of their functions by diminishing the respect due to them."

12.50 ಪಿ.ಎಂ

ನಮ್ಮ ದೇಶದಲ್ಲಿ ಸಂಸ್ಕೃತಿ ಮತ್ತು ಕನ್ನಡದ ಬಗ್ಗೆ ನನಗೆ ಯಾರೂ ಪಾಠ ಹೇಳಿಕೊಡಬೇಕಾಗಿಲ್ಲ ಸ್ವಾಮಿ. ಸಂಸ್ಕೃತಿ ಬಗ್ಗೆ ಇವತ್ತು ಸಂಸ್ಕೃತಿ ಇಲ್ಲದೇ ಇರತಕ್ಕ ಈ ಪತ್ರಿಕೆಗಳಿಗೆ ನಾನು ಹೇಳಿಕೊಡುತ್ತೇನೆ ಪಾಠ ಸಂಸ್ಕೃತಿ ಮತ್ತು ಕನ್ನಡ ಏನಿದೆ ಎನ್ನುವುದನ್ನು. ನನಗೆ ಯಾರೂ ಪಾಠ ಹೇಳಿಕೊಡಬೇಕಾಗಿಲ್ಲ. ನಮ್ಮ ಸಂಸ್ಕೃತಿ ಏನು ಇವತ್ತಿನ ದಿವಸ? ಹೆಣ್ಣು ಮಕ್ಕಳಿಗೆ ಏನು ಗೌರವ ಕೊಡುತ್ತೀರಿ? ಯಾವ ಮನೆತನದಿಂದ ಬಂದಿದ್ದಾಳೆ? ಅವಳ ಚರಿತ್ರೆ ಏನಿದೆ? ಅವಳ ಹಿನ್ನೆಲೆ ಏನು ಎಂದಾಗ... ಪತ್ರಿಕೆಯಲ್ಲಿ ಶಿವಮೂರ್ತಿ ಶಾಸ್ತ್ರಿಗಳ ಸೊಸೆ ಎಂದು ಹೇಳಿಕೊಂಡು ತಿರುಗುತ್ತಿದ್ದಾಳೆ ಎಂದು ಹೇಳಿದ್ದಾರೆ. ಮತ್ತೆ ಶಿವಮೂರ್ತಿ ಶಾಸ್ತ್ರಿಗಳ ಸೊಸೆ ಅಲ್ಲದೆ ಇನ್ನು ಯಾರ ಸೊಸೆ ಎಂದು ಹೇಳಿಕೊಂಡು ತಿರುಗಬೇಕು? ಇದು ನಮ್ಮ ಸಂಸ್ಕೃತಿ ಅಲ್ಲವೆ? ಹೆಣ್ಣುಮಕ್ಕಳ ಅಳತೆಗೋಲು, ಹೆಣ್ಣುಮಕ್ಕಳ ಮರ್ಯಾದೆಯನ್ನು ಯಾವುದರಿಂದ ಅಳೆಯುತ್ತಾರೆ ಸ್ವಾಮಿ? ಯಾರದಾದರೂ ಮನೆಗೆ ಹೋದರೆ ಯಾವ ಮನೆತನದಿಂದ ಬಂದಿದ್ದಾಳೆ ಹೆಣ್ಣುಮಗಳು, ಆ ಹೆಣ್ಣುಮಗಳ ಗಂಡ ಯಾರು, ಆ ಹೆಣ್ಣುಮಗಳ ಹಿನ್ನೆಲೆ ಏನು ಎಂದು ಹೇಳುವುದು ನಮ್ಮ ಸಂಸ್ಕೃತಿ ಅಲ್ಲವೇ? ಈ ಅಸಂಸ್ಕೃತ ಪತ್ರಿಕೆಯಲ್ಲಿ ನಮ್ಮ ಸಂಸ್ಕೃತಿ ವಧೆ ಮಾಡುವುದಕ್ಕೆ ಹೋದಾಗ ನನಗೆ ಯಾರೂ ಸಂಸ್ಕೃತಿ ಬಗ್ಗೆ ಪಾಠ ಹೇಳಿಕೊಡಬೇಕಾಗಿಲ್ಲ ಇವತ್ತಿನ ದಿವಸ. ಆ ಒಂದು ಮನೆತನದಲ್ಲಿ ಹುಟ್ಟಿ ಬೆಳೆದಿದ್ದೇನೆ ನಾನು. ಕನ್ನಡಕ್ಕೋಸ್ಕರ, ಕರ್ನಾಟಕದ ಚಳುವಳಿಗಾಗಿ, ಕರ್ನಾಟಕವನ್ನು ಉಳಿಸಬೇಕು ಎಂದು ಹೇಳಿ ಯಾವ ಮನೆತನದಲ್ಲಿ ಇವತ್ತಿನ ದಿವಸ ಮೊಳೆ ಜೋಡಿಸಿ ಪ್ರೆಸ್ ನಡೆಸಿ ಕರ್ನಾಟಕ ಪತ್ರಿಕೆಯನ್ನು ಹೊರಡಿಸತಕ್ಕಂಥ ಒಬ್ಬ ಹೆಣ್ಣು ಮಗಳಿಗೆ ಕನ್ನಡದ ಗಂಧ ಇಲ್ಲ, ಮೂಲಭೂತವಾಗಿ ಕನ್ನಡ ಗೊತ್ತಿಲ್ಲ ಎಂದು ಪಾಠ ಹೇಳತಕ್ಕದ್ದನ್ನು ಸಹಿಸಬೇಕಾ ಸ್ವಾಮಿ ಇವತ್ತಿನ ದಿವಸ? ಏನಾಗಿದೆಯೆಂದರೆ ರಾಜಕೀಯದಲ್ಲಿ ಇವತ್ತು ಹೆಣ್ಣುಮಕ್ಕಳು ಬಂದಾಗ, ಎಲ್ಲವನ್ನೂ ಹೇಳಿದಾಗ ಕೂಡ ಇವತ್ತು ಜನ ಹಾಸ್ಯವಾಗಿ ತೆಗೆದುಕೊಂಡಾಗ ಕೊನೇ ಅಸ್ತ್ರ ಬಳಸತಕ್ಕದ್ದು, ಬಹಳ ದುಃಖದಿಂದ ಹೇಳುತ್ತೇನೆ, ಹೆಣ್ಣುಮಕ್ಕಳ ತೇಜೋವಧೆ ಮಾಡಬೇಕಾದರೆ ಯಾವುದಾದರೂ ಒಂದು ಕೊನೇ ಅಸ್ತ್ರ ಬಳಸತಕ್ಕದ್ದು ಕ್ಯಾರೆಕ್ಟರ್ ಅಸ್ಯಾಸಿನೇಷನ್. ನನಗೆ ವಯಸ್ಸಾಗಿದೆ ಇವತ್ತು. ಆ ಕಾಲ ಬಹಳ ಹಿಂದೆ ಹೋಯಿತು. ಸಾಕಷ್ಟು ಪತ್ರಿಕೆಯವರು ಬರೆದರು ಚಿಕ್ಕ ವಯಸ್ಸಿನಲ್ಲಿ ನಾನು ಕಾರ್ಪೊರೇಟರ್ ಆದಾಗ. ಚಿಕ್ಕ ಚಿಕ್ಕ ವಯಸ್ಸಿನವರೆಲ್ಲಾ ಹೆಣ್ಣುಮಕ್ಕಳು ಇವತ್ತು ವಿಧಾನಸಭೆಗೆ ಬಂದಿದ್ದಾರೆ. ಹೇಮಾವತಿ ಮೊದಲ ಸಾರಿ ಬಂದಿದ್ದಾರೆ. ವಿಮಲಬಾಯಿ ಬಂದಿದ್ದಾರೆ. ಜ್ಯೋತಿರೆಡ್ಡಿ ಬಂದಿದ್ದಾರೆ. ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡಿದರೆ ನಾಳೆ ಇವರ ಮನೆಯಲ್ಲಿ ಏನು ಅಂದಾರು? ಮನೆಗೆ ಹೋದತಕ್ಷಣ ಹೇಳುತ್ತಾರೆ. ವಿಧಾನಸೌಧಕ್ಕೆ ಇದಕ್ಕೇನಾ ಹೋಗುವುದು ಎಂದು. ಮನೆಯವರು ಏನನ್ನುತ್ತಾರೆ? ಸಮಾಜದಲ್ಲಿ ಏನನ್ನುತ್ತಾರೆ? ಕ್ಷೇತ್ರದಲ್ಲಿ ಏನನ್ನುತ್ತಾರೆ ಇವತ್ತಿನ ದಿವಸ? ಕ್ಷೇತ್ರದಲ್ಲಿ ನಾವು ಕ್ಷೇಮವಾಗಿ ಓಡಾಡತಕ್ಕ ಪರಿಸ್ಥಿತಿ ಇದೆಯೇ? ಗಂಡಸರು ಏನು ಮಾಡಿದರೂ "ಬಾರಾಖೂನ್

ಮಾಫ್". ಏನು ಮಾಡಿದರೂ ನಡೆಯಬಹುದು ಅವರು. ಆದರೆ ಹೆಣ್ಣುಮಕ್ಕಳು ಇವತ್ತು ರಾಜಕೀಯದಲ್ಲಿ ಬರಬೇಕಾದರೆ ಚಾರಿತ್ರ್ಯವನ್ನು ಕಾಪಾಡಿಕೊಂಡು ಸಮಾಜವನ್ನು ಕಟ್ಟಿಕೊಂಡು ಮನೆತನವನ್ನು ಕಾಪಾಡಿಕೊಂಡು ತೂಗಿಸಿಕೊಂಡು ಸಮಾಜದಲ್ಲಿ ಕೆಲಸ ಮಾಡುವುದಕ್ಕೆ ಬಂದಾಗ ಇಂಥ ಕಪ್ಪು ಚುಕ್ಕೆಗಳನ್ನು ಇಟ್ಟಾಗ ಮುಂದೆ33 ಪರ್ಸೆಂಟ್ ರಾಜಕೀಯದಲ್ಲಿ ತರುವುದು ಹೇಗೆ? ಇದೇನಾಗುತ್ತದೆಂದರೆ ಮಹಿಳೆಯರಿಗೆ ಯಾವುದೂ ಸಿಗದೇ ಇರುವಾಗ ಅವಳಿಗೆ ಏನಾದರೂ ಹೇಳಬೇಕೆಂದರೆ ಅವಳ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡುವುದೇ ಕೊನೇ ಅಸ್ತ್ರ. ಇದು ಕೊನೇ ಅಸ್ತ್ರ ಹೆಣ್ಣುಮಕ್ಕಳ ತೇಜೋವಧೆ ಮಾಡಬೇಕು ಅಂದರೆ. ಇಂಥ ಪರಿಸ್ಥಿತಿಯಲ್ಲಿ ಯಾರನ್ನೂ ಬಿಟ್ಟಿಲ್ಲವಲ್ಲಾ ಸ್ವಾಮಿ ಇವತ್ತು. ಹಾಗಾದರೆ ಪತ್ರಿಕಾಕರ್ತರಿಗೆ, ಬರೆಯತಕ್ಕವರಿಗೆ ಇವತ್ತು ಯಾವ ಹೆಣ್ಣುಮಕ್ಕಳು ರಾಜಕೀಯಕ್ಕೆ ಬರಬಾರದು ಎಂದು ಅಭಿಪ್ರಾಯ ಇದೆಯೇ? ಅವರದೇ ಪತ್ರಿಕೆಯಲ್ಲಿ ಇನ್ನೊಂದು ಕಾಲಂನಲ್ಲಿ ಬರೆಯುತ್ತಿದ್ದಾರೆ ಇನ್ನೊಬ್ಬರು ಬರಹಗಾರರು ಇವತ್ತಿನ ದಿವಸ. ಅವರದೇ ಪತ್ರಿಕೆ. ನಮ್ಮ ಮನಸ್ಸಿನ ಭಾವನೆಗಳನ್ನು ತಾವು ಬಹಳ ಗಂಭೀರತೆಯಿಂದ ಪರಿಗಣಿಸಿದ್ದೀರಿ. ಈ ಹೌಸ್‌ನಲ್ಲಿರತಕ್ಕ ಎಲ್ಲಾ ಸಹೋದರರಿಗೂ... ಇದು ನಮ್ಮದಷ್ಟೇ ಅಲ್ಲ, ಇಲ್ಲಿ ಕುಳಿತಿರತಕ್ಕವರೆಲ್ಲರ ಮೇಲೂ ಬರೆದಿದ್ದಾರೆ. ಯಾರನ್ನೂ ಬಿಟ್ಟಿಲ್ಲ. ಯಾರಿಗೂ ಹೊರತಾಗಿಲ್ಲ ಇವತ್ತಿನ ದಿವಸ. ಪ್ರತಿಯೊಬ್ಬ ಶಾಸಕರು ಪ್ರತಿಯೊಬ್ಬ ಮಂತ್ರಿಗಳೂ ಪ್ರತಿಯೊಬ್ಬ ಮುಖ್ಯಮಂತ್ರಿಗಳು ಪ್ರತಿಯೊಬ್ಬ ಪ್ರಧಾನಮಂತ್ರಿಗಳ ಮೇಲೂ ಕೂಡ ಇವತ್ತು ಬರೆದಿದ್ದಾರೆ. ಆದರೆ ಇವತ್ತಿನ ದಿವಸ ಇಂಥ ಪತ್ರಿಕೆಗಳು ಏನಿವೆ ಇದನ್ನು ಯಾವರೀತಿ ತಡೆಹಿಡಿಯಬೇಕು? ಸನ್ಮಾನ್ಯ ನಮ್ಮ ನಾಯಕರಾದಂಥ ಮುಖ್ಯಮಂತ್ರಿಯವರು ಇದ್ದಾರೆ. ಬಹುಶಃ ನಾನೇನಾದರೂ ಈ ಕಟ್ಟಲೆಯನ್ನು ಅಥವಾ ಮಂತ್ರಿಯಾಗಿ ನಾನೇನಾದರೂ ಬಾವಿಗೀವಿಗೆ ಬಿದ್ದರೆ ದಯವಿಟ್ಟು ಅದನ್ನು ತಪ್ಪು ತಿಳಿದುಕೊಳ್ಳಬಾರದು ಎಂದೂ ಕೂಡ ತಮ್ಮ ಪರವಾಗಿ ಮುಖ್ಯಮಂತ್ರಿಯವರ ಹತ್ತಿರ ಕೂಡ ಕೇಳಿಕೊಳ್ಳುತ್ತಿದ್ದೇನೆ. ನಾನು ಇವತ್ತು ಮಂತ್ರಿಯಾಗಿ ಈ ಮಾತನ್ನು ಹೇಳುತ್ತಿಲ್ಲ. ನಾನು ಶಾಸಕಿಯಾಗಿ ಹೇಳುವುದಕ್ಕಿಂತ ಮಹಿಳೆಯರ ಒಂದು ತೇಜೋವಧೆ ಮಾಡಿದ್ದಕ್ಕೆ ಪ್ರತಿಭಟನೆ ಮಾಡಬೇಕೆಂದು ನನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ತಾವು ಅವಕಾಶ ಕೊಟ್ಟಿದ್ದೀರಿ. ಸಹೋದರಿ ಪ್ರಮೀಳ ಅವರು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡಿ. ಇದು ತೀರ್ಮಾನವಾಗಬೇಕು ಈ ಸಭೆಯಲ್ಲಿ. ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು. ಇದು ಗಂಭೀರವಾದಂಥ ವಿಷಯ ಎಂದು ಎಲ್ಲಾ ನನ್ನ ಸಹೋದರಿಯರ ಪರವಾಗಿ ಪ್ರಾರ್ಥನೆ ಮಾಡಿಕೊಂಡು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಯನ್ನು ಅರ್ಪಿಸುತ್ತೇನೆ.

ಶ್ರೀಮತಿ ವಿಮಲಬಾಯಿ ದೇಶಮುಖ್ (ಮಾನ್ಯ ಮಹಿಳೆ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಎಲ್ಲಾ ಹೆಣ್ಣುಮಕ್ಕಳೂ ಕೂಡಿ ನಮ್ಮ ನಮ್ಮ ನೈತಿಕ ಮಟ್ಟದ ಬಗ್ಗೆ ನಾವು ವಿಚಾರ ಮಾಡಲಾಗಿ ಇದು ಒಂದು ನಮ್ಮ ರಾಜಕೀಯ ತೇಜೋವಧೆ ಎಂದು ನಾನು ಭಾವಿಸುತ್ತೇನೆ. ಆದಕಾರಣ ಜ್ಯೋತಿರೆಡ್ಡಿಯವರು, ಹೇಮಾವತಿಯವರು ಮತ್ತು ಲೀಲಾದೇವಿಯವರು ಹೇಳಿದ್ದಾರೆ. ಅದರಂತೆ ನನಗೂ ಕೂಡ ರಾಜಕೀಯದಲ್ಲಿ ತೇಜೋವಧೆಯಾಗಿದೆ. ನನಗೆ ಮಂತ್ರಿಸ್ಥಾನ ಮುಖ್ಯ ಅಲ್ಲ. ನನ್ನ ಮನೆತನದ ಮಾನ ಮರ್ಯಾದೆ ಮುಖ್ಯವಾಗಿರುತ್ತದೆ. ಆದಕಾರಣ ಮುಖ್ಯಮಂತ್ರಿಯವರು

ನಮಗೆ ರಕ್ಷಣೆ ಕೊಡಬೇಕೆಂದು ಹೇಳಿಕೊಂಡು ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಅಧ್ಯಕ್ಷರೆ, ಇದು ಬ್ರೀಜ್ ಆಫ್ ಪ್ರಿವಿಲೈಜ್ ಆಗುತ್ತದೆ. ಅದಕ್ಕಾಗಿ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಯಲ್ಲೋ ಜರ್ನಲಿಸಂ ಈ ಹಂತ ತಲುಪಿದೆ ಇವತ್ತು. ಏತಕ್ಕೆ ತಲುಪಿದೆ? ಏತಕ್ಕೆ ತಲುಪಿದೆ ಎಂದು ಇದನ್ನು ನಾವು ಇಗ್ನೋರ್ ಮಾಡಿಕೊಂಡುಬಂದೆವು. ಏನೋ ಮೂರು ಕಾಸಿನ ಪತ್ರಿಕೆ ಬರೆಯುತ್ತವೆ, ಓದದೇ ಇದ್ದರೆ ಆಯಿತು ಎಂದು ಇಗ್ನೋರ್ ಮಾಡಿಕೊಂಡ ಬಂದೆವು. ನಾನು ಹೋದಸಾರಿ ಸಭೆಯಲ್ಲಿ ವಿನಂತಿಸಿಕೊಂಡೆ. ರೋಲ್ ಆಫ್ ದಿ ಎಗ್ಸಿಕ್ಯುಟೀವ್, ಜ್ಯುಡಿಷಿಯರಿ, ಲೆಜಿಸ್ಲೇಚರ್ ಬಗ್ಗೆ ಹೇಳುವಾಗ ಪ್ರೆಸ್ಸಿನ ಬಗ್ಗೆಯೂ ಹೇಳಿದ್ದೆ. ಹಾಗಾಗಿ ಮೂರು ಕಾಸಿನ ಪತ್ರಿಕೆಗಳು ಎಂದು ಕರೆದೆ ಯಲ್ಲೋ ಜರ್ನಲಿಸಮ್ಮನ್ನು ಡೈಲಿ ಪತ್ರಿಕೆಗಳಲ್ಲ. ಕಾನೂನು voluntarily should take cognisance of offences committed by such persons. ಇದಕ್ಕೆ ದೂರು ಕೊಟ್ಟುಕೊಂಡು ಕೂಡುವುದಕ್ಕಾಗುತ್ತದೆಯೇನು? Your ordinary policeman should be able to take action. ಈ ಸಭೆಯಲ್ಲಿ ನಾನು ಪ್ರತಿಪಾದನೆ ಮಾಡಿದೆ. ಇವತ್ತು ಬರೆದಿರುವುದು ಓದುವುದಕ್ಕೆ ನಾಚಿಕೆಯಾಗುತ್ತದೆ. I don't know what he is trying to convey to the people. ಇದು ನೋಡಿ ನನಗೆ ಭಾರಿ ನೋವಾಯಿತು. ಇದರ ಬಗ್ಗೆ ನಮ್ಮ ಮಹಿಳಾ ಸದಸ್ಯರು ದೂರು ಕೊಟ್ಟುಕೊಂಡು ಕೂರುವುದಕ್ಕಾಗುತ್ತದಾ? ನೋಡಿ, ಪಾಪ, ವಿಮಲಬಾಯಿ ಅವರ ವಿಚಾರಕ್ಕೆ ಬರೆಯುತ್ತಾರೆ. "ಈಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ. ಅಜಯಕುಮಾರ್ ಸರ್‌ನಾಯಕ್, ಯುವಜನ ಮತ್ತು ಕ್ರೀಡಾಸಚಿವರು ಇವರ ಯಾವುದೇ ಇನ್‌ಫ್ಲೂಯೆನ್ಸ್ ಈಕೆಯ ಮೇಲೆ ನಡೆಯುತ್ತಿದೆ ಎಂಬ ಸುದ್ದಿ ಇದೆ. ಖಾಸಗಿಯಾಗಿ ಆಗಿಂದಾಗ್ಗೆ ಮುಂಬೈ ಮೊದಲಾದ ಕಡೆ ಜಾಲಿ ಟ್ರಿಪ್ ಮಾಡುವ ವಿಮಲಬಾಯಿ... What does it mean? What he is trying to convey? ಆಮೇಲೆ ನೋಡಿ ಪಾಪ. ಹೇಮಾವತಿ ಅವರ ಬಗ್ಗೆ ಒಂದು ಸೆಂಟೆನ್ಸ್ ಓದುತ್ತೇನೆ. "ಪತ್ರಕರ್ತರಿಗೆ ಪೂಸಿ ಹೊಡೆಯುವುದರಲ್ಲಿ, ಮನೆಗೆ ಬರುವ ಕೆಲವು ಪತ್ರಕರ್ತರಿಗೆ ಅಗತ್ಯ ಅತಿಥ್ಯ ಒದಗಿಸುವುದರಲ್ಲೂ ಹೇಮಾವತಿ ಹೆಸರು ಮಾಡಿದ್ದಾರೆ" ಇವುಗಳನ್ನೆಲ್ಲಾ ಸದಸ್ಯರು ದೂರು ಕೊಟ್ಟುಕೊಂಡು ಕೂರುವುದಕ್ಕಾಗುತ್ತದಾ? What he is trying to convey? Your constable should be able to take action against them. That is what I said in the last Assembly. ಅಧ್ಯಕ್ಷರೇ, ತಾವು ರೂಲಿಂಗ್ ಕೊಡಬೇಕಾದರೆ ಇದಕ್ಕೆ ಇರತಕ್ಕ ಮಹತ್ವವನ್ನು ಅರ್ಥಮಾಡಿಕೊಂಡು, I don't mind if you adjourn the House for half an hour and I don't want such stupid fellow to be brought before the House. ಅವರಿಗೆ ಅದೇ ಒಂದು ದೊಡ್ಡಸ್ತಿಕೆ ಸಭೆಗೆ ಕರೆಸಿಬಿಟ್ಟರೆ ಏಕೆಂದರೆ ಕೆಲವರು ಹೇಳಿದರು ಸಭೆಗೆ ಕರೆದು ಅಡ್ಮಾನಿಷ್ ಮಾಡಬೇಕು ಎಂದು. ಅಂಥವರನ್ನೆಲ್ಲಾ ಸಭೆಗೆ ಕರೆಯಬಾರದು. ಅಂಥವರು ಈ ಸಭೆಗೆ ಬರುವುದಕ್ಕೆ ನಾಲಾಯಕ್ಕು. ಇವರನ್ನು ನಾಯಿಗಳನ್ನು ನಡೆಸಿದಹಾಗೆ ನಡೆಸಿಕೊಳ್ಳಬೇಕು. ಯಾರೋ ದೊಡ್ಡ ದೊಡ್ಡ ಪತ್ರಿಕೆಯವರಿರುತ್ತಾರೆ. ಅವರನ್ನು ಕರೆಸಿದರೆ ಅದಾದರೂ ಒಂದು ತರಹ. ಅವರಿಗೆ ತೂಕ ಇರುತ್ತದೆ. ಇಂಥ ಪತ್ರಿಕೆಯವರನ್ನು

ಈ ಸಭೆಗೆ ಕರೆಸುವುದು ಅಡ್ಮಾನಿಷ್ ಮಾಡುವುದಕ್ಕೆ? A police constable should be able to kick them. ಆ ತರಹ ಕಾನೂನು ಮಾಡಿ ನೀವು ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ನಾನು ಹೋದಸಾರಿಯೂ ಪ್ರತಿಪಾದನೆ ಮಾಡಿದೆ. ಇದು ಅಕ್ಷಮ್ಯ ಅಪರಾಧ. ಕ್ಯಾರೆಕ್ಟರ್ ಅನ್ಯಾಸಿನೇಷನ್‌ಗೂ ಒಂದು ಮಿತಿ ಇರಬೇಕು. ದಯವಿಟ್ಟು ಸಭಾಧ್ಯಕ್ಷರೇ, ತಾವು ಸದನವನ್ನು ಮುಂದೂಡಿದರೂ ಪರವಾಗಿಲ್ಲ. ಇದನ್ನು ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದು ಕೊನೆಯಾಗಬೇಕು. ಈ ತರಹ ಆಗಬಾರದು. ಯಾರೂ ಈ ತರಹ ಪತ್ರಿಕೆಗಳಲ್ಲಿ ಇಷ್ಟಬಂದಹಾಗೆ ಪ್ರಿಂಟ್ ಮಾಡಿಕೊಂಡು ಹೋಗಬಾರದು ಏಕೆಂದರೆ gullible public,- ನಾವು ಓದದೇ ಇರಬಹುದು - ಅವರು ಓದುತ್ತಾರೆ ಪಾಪ. ಬಸ್ ಸ್ಟ್ಯಾಂಡಿನಲ್ಲಿ, ಹೋಟೆಲ್‌ಗಳಲ್ಲಿ ಓದುತ್ತಾರೆ. ಅವರು ಓದುವುದೇ ಇಂಥದ್ದನ್ನು. They are influenced. They believe it also. ಸಾಮಾನ್ಯ ಜನರಿಗೆ ಗೊತ್ತಿರುವುದಿಲ್ಲ. ಪತ್ರಿಕೆಯಲ್ಲಿ ಪ್ರಿಂಟ್ ಆಗಿರುವುದೆಲ್ಲಾ ನಿಜ ಎಂದು ತಿಳಿದುಕೊಂಡಿರುತ್ತಾರೆ. ದಯವಿಟ್ಟು ಇದನ್ನು ತಾವು ಸೀರಿಯಸ್ ಆಗಿ ಪರಿಗಣಿಸಿ ಎಲ್ಲರೂ ಸೇರಿಕೊಂಡು ಇದಕ್ಕೆ ಮುಕ್ತಾಯ ಹಾಡಬೇಕು. ಇಂಥಾದ್ದು ಪ್ರಿಂಟ್ ಆಗಕೂಡದು. ಪ್ರಿಂಟ್ ಮಾಡಿದರೆ ಆಯಾಯ ಪೊಲೀಸ್ ಸ್ಟೇಷನ್‌ನವರೇ ಕ್ರಮ ಕೈಗೊಳ್ಳತಕ್ಕಂಥ ಕಾನೂನನ್ನು ಮಾಡಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮುಖ್ಯಮಂತ್ರಿಗಳು ಹೇಳಬೇಕು. ನಮ್ಮ ನಮ್ಮ ಭಾವನೆಗಳನ್ನು ಅವರು ಅರ್ಥಮಾಡಿಕೊಂಡಿದ್ದಾರೆ.

+ ಶ್ರೀ ಜೆ. ಎಚ್. ಪಟೇಲ್ (ಮುಖ್ಯಮಂತ್ರಿ) : ಮಾನ್ಯ ನಂಜೇಗೌಡರ ಸಲಹೆಯನ್ನು ಒಪ್ಪಿಕೊಳ್ಳುತ್ತಾ, ತಮ್ಮ ಸಲಹೆಗೋಸ್ಕರ ನಮ್ಮನ್ನೆಲ್ಲಾ ಕರೆದು ಏನು ಮಾಡಬೇಕು, ಇದರ ಬಗ್ಗೆ ಚರ್ಚೆ ಮಾಡುವಷ್ಟು ಘನತೆಯೂ ಇಲ್ಲ ಈ ಪತ್ರಿಕೆಗೆ. ಇಷ್ಟೊಂದು ನೀಚತನಕ್ಕೆ, ಕೆಳಮಟ್ಟಕ್ಕೆ ಇಳಿದಿರತಕ್ಕಂಥ... ಪತ್ರಕರ್ತರಿಗೆ ಎಲ್ಲಾ ದೇಶಗಳಲ್ಲೂ ಸಾಕಷ್ಟು ಗೌರವ, ಮನ್ನಣೆ ಇದೆ. ಅವರ ಬರಹಗಳನ್ನು ಓದಿ ಎಷ್ಟೋ ಸಾರಿ ಹೊಸ ಹೊಸ ಪ್ರೇರಣೆಗಳು, ನಾವು ರಾಜಕಾರಣಿಗಳಿಗೆ ಈಗ ದಾಸ್‌ಕ್ಯಾಪಿಟಲ್‌ನೋ ಅಥವಾ ಕಾರ್ಲ್‌ಮಾರ್ಕ್ಸ್‌ನ ಗ್ರಂಥಗಳನ್ನು ಓದುವುದಕ್ಕೆ ಪುರಸೊತ್ತು ಇರುವುದಿಲ್ಲ. ಏನೋ ನಾವು ವಿದ್ಯಾರ್ಥಿಗಳಿದ್ದಾಗ ಓದಿರುತ್ತೇವೆ. ವಕೀಲರಾಗಿದ್ದವರು ಆಗ ಓದಿರುತ್ತಾರೆ. ಸಾಮಾನ್ಯ ಜನರಿಂದ ಆರಿಸಿ ಬಂದಂಥವರು ಅವರು ಇವತ್ತು ಏನಾದರೂ ದಿನಪತ್ರಿಕೆಗಳನ್ನು ಓದುವುದೇ ಒಂದು ಸುದ್ದಿಸಂಗ್ರಹಕ್ಕೆ. ಅದರಿಂದ ಅವರು ವಿಚಾರಗಳು ಪ್ರಭಾವಿತವಾಗುತ್ತವೆ. ಸಾಮಾನ್ಯವಾಗಿ ದಿನಪತ್ರಿಕೆಗಳಲ್ಲಿ ಆ ದಿನದ ನಡೆದ ಘಟನೆ ಏನು ಅಥವಾ ಯಾವುದೇ ದೇಶದಲ್ಲಿ, ಇರಲಿ ಮತ್ತೊಂದು ಇರಲಿ ಆ ಘಟನೆಯ ಪ್ರಾಮುಖ್ಯತೆಯನ್ನು ಆಧರಿಸಿ ಅದನ್ನು ಪ್ರಕಟಿಸುತ್ತಾರೆ. ಅದರೊಳಗೆ ಕೆಲವು ಸಫಿಷಿಯೆಂಟ್ಸ್ ಇರಬಹುದು ಅಥವಾ ಇಲ್ಲದೇ ಇರಬಹುದು. ಆದರೆ ಯಾವುದೇ ಚಾರಿತ್ರ್ಯ ಹರಣಕ್ಕೆ ಹೋಗುವುದಿಲ್ಲ. ಸುದ್ದಿ ತಪ್ಪಾಗಬಹುದು ಅಥವಾ ಆ ಸುದ್ದಿಯು ವರದಿಗಾರನ ಇಚ್ಛೆಗೆ ತಕ್ಕಂತೆ ಆಗಿರಬಹುದು. ಅವನ ಇಮೇಜಿನೇಷನ್‌ಗೆ ತಕ್ಕಂಥ ಆಗಿರಬಹುದು. ಆದಕ್ಕೆ ಅಬ್ಜೆಕ್ಟಿವಿಟಿ ಇಲ್ಲದೇ ಇರಬಹುದು. But there is no vulgarity in it. ಆದರೆ

ಇದರೊಳಗೆ ಮಾನ್ಯ ನಂಜೇಗೌಡರು ಹೇಳಿದಹಾಗೆ ಮಾನ್ಯ ಅಧ್ಯಕ್ಷರೇ, ಕರ್ನಾಟಕಕ್ಕೆ ಒಂದು ಪ್ರೆಸ್ ಕೌನ್ಸಿಲನ್ನು ಏಕೆ ಮಾಡಬಾರದು? ಏಕೆಂದರೆ ಇದಕ್ಕೆ ಪ್ರೆಸ್ ಕೌನ್ಸಿಲ್‌ನ ಪ್ರೊಟೆಕ್ಷನ್ ಇದೆ. ಪ್ರೆಸ್ ಕೌನ್ಸಿಲ್ ಮೂಲಕ ಹೋಗಿ ಇವರನ್ನು ಪನಿಷ್ ಮಾಡಬೇಕು ಎಂದು ಇದೆ. ಪ್ರೆಸ್ ಕೌನ್ಸಿಲ್ ಮೂಲಕ ಹೋಗಿ ಪನಿಷ್ ಮಾಡತಕ್ಕಂಥ ಈ ಕ್ರಮಕ್ಕೆ ಹೋದರೆ ಅವರು ಈ ತರಹ ಬರೆದುಕೊಂಡು ಹೋಗುತ್ತಿರುತ್ತಾರೆ. ಈ ಸದನ ಅಥವಾ ಎರಡೂ ಸದನಗಳು ಈ ಬಗ್ಗೆ ಇಂತಹ vulgarity character assassination, baseless allegation ಅದು ಏನಾಗಿದೆ ಎಂದರೆ ಮಾನ್ಯ ಅಧ್ಯಕ್ಷರೇ, ನಾವು ಪರಸ್ಪರರು ಹೇಳುವಾಗಿ ಸಾವಿರಾರು ಕೋಟಿ, ಎಂದು ಹೇಳಿ ಬಿಡುವುದು. ಏನೂ ಆಧಾರ ಇರುವುದಿಲ್ಲ ಅಥವಾ ರಾಜಕೀಯವಾಗಿ ಪರಸ್ಪರ ಕೆಸರನ್ನು ಎರಚತಕ್ಕಂಥ ನಾವು ಆ ಕೆಲಸ ಮಾಡಿದರೆ, ಅವು ಇನ್ನೂ ಕೆಳಕ್ಕೆ ಹೋಗಿದ್ದಾವೆ, ಗಟಾರಕ್ಕೆ ಇಳಿದಿದ್ದಾವೆ. ಶ್ರೀಮತಿ ಲೀಲಾದೇವಿ ಅವರು ಬಂದು ಹೀಗೆ ಆಗಿದೆ ಒಂದು ಹೇಳಿದರು. ನಾನು ಆ ಪತ್ರಿಕೆಯನ್ನು ಓದುವುದು ಬಿಟ್ಟು ವರ್ಷಗಟ್ಟಲೆ ಆಯಿತು. ಅದನ್ನು ಓದುವುದರಿಂದ ಏನೂ ಪ್ರಯೋಜನ ಇಲ್ಲ. ಯಾರು ತಂದು ಹಾಕಿದರೂ ನಾನು ನೋಡುವುದೇ ಇಲ್ಲ. ಅದಕ್ಕೆ ಇಂತಹ ಎಲ್ಲೋ ಜರ್ನಲಿಸಂ ಏನಿದೆ, ಅದು this is not even yellow journalism. Something much worse than yellow journalism .. disgusting. ಅದನ್ನು ನಾವು ಇವತ್ತು ಹಾಗೆ ನೋಡಿಕೊಳ್ಳದೆ ಇಂತಹ ಕೆಲವರು ಹೆಲ್ಪ್‌ಲೆಸ್ ಆಗುತ್ತಾರೆ. ಆಮೇಲೆ ಒಂದು ಊರಿನಲ್ಲಿ ಒಬ್ಬ ಪತ್ರಿಕೆ ಸ್ಟಾರ್ಟ್ ಮಾಡಿದ. ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀಧರ್ ಆಚಾರನ ಕೆಲಸಗಳು - ಮುಂದಿನವಾರದಲ್ಲಿ ಎಂದು ಹಾಕಿಬಿಡುವುದು, ಆ ಶ್ರೀಧರ್ ಆಚಾರನ ಮನೆಗೆ ಹೋಗುವುದು. ಆಮೇಲೆ ಮುಂದಿನವಾರ ಅವನೂ ಇಲ್ಲ, ಇವನೂ ಇಲ್ಲ. ಈ ಮಟ್ಟಕ್ಕೆ ಇಳಿದರೆ, ತಪ್ಪಾಗಿದ್ದರೆ ತಪ್ಪು ಎಂದು ಹೇಳಲಿ. ಈಗ ಹಿಂದೂ ಪತ್ರಿಕೆ ಇದೆ. ನಾವೆಲ್ಲರೂ ಅತ್ಯಂತ ಗೌರವದಿಂದ ಅದನ್ನು ಓದುತ್ತೇವೆ. ಅದರೊಳಗೆ ಏನಾದರೂ ವಿಷಯ ಬಂದರೆ ಒಪ್ಪುತ್ತೇವೆ. ಇನ್ನು ಪ್ರಜಾವಾಣಿ ಇದೆ, ಕನ್ನಡಪ್ರಭ ಇದೆ. ಸಂಯುಕ್ತ ಕರ್ನಾಟಕದವರಿಗೆ ಅವರದ್ದೇ ಆದ ರಾಜಕೀಯ ಉದ್ದೇಶ ಇರಬಹುದು. ಆದರೆ ಅವರು ಏನು ಬರೆಯುತ್ತಾರೋ ಅದನ್ನು ವಸ್ತುಸ್ಥಿತಿ ಆಧಾರದ ಮೇಲೆ ನಾವು ಓದುತ್ತೇವೆ. ಇಂಗ್ಲೀಷ್ ಪೇಪರ್ಸ್ ಏಷಿಯನ್ ಏಜ್, ಟೈಮ್ಸ್ ಆಫ್ ಇಂಡಿಯಾ, ಹಿಂದೂ-ಅದು ಟಾಪ್ ಕ್ಲಾಸ್. ಆಮೇಲೆ ಡೆಕ್ಕನ್ ಹೆರಾಲ್ಡ್ ಇವು ಇವೆ. ಅವರು ಬರೆದುಕೊಳ್ಳುವುದು, ಅವರ ಅಭಿಪ್ರಾಯಗಳು ತಪ್ಪು ಇರಬಹುದು. ಆದರೆ ಇದು ಇಷ್ಟು ಕೆಳಮಟ್ಟಕ್ಕೆ ಹೋಗುವುದಿಲ್ಲ ಒಂದು ಸಾರಿ ಮಾನ್ಯ ಅಧ್ಯಕ್ಷರೇ, ನನ್ನ ಬಗ್ಗೆ ಒಂದು ಇಂಟರ್‌ವ್ಯೂ ಹಾಕಿದ್ದರು ಈ ಪತ್ರಿಕೆಯಲ್ಲಿ which had never taken place. ನನ್ನ ಇಂಟರ್‌ವ್ಯೂನೇ ಮಾಡಿಲ್ಲ. ಇಂಟರ್‌ವ್ಯೂ ಮಾಡಿದ್ದೇವೆ ಎಂದು ಪತ್ರಿಕೆಯಲ್ಲಿ ಹಾಕಿದ್ದರು. ನಾನು ಅವತ್ತು ವೈಯಕ್ತಿಕವಾಗಿ ಬಹಳ ಕೆರಳಿದ್ದೆ. ಆದರೆ ಇದನ್ನು ಏನಾದರೂ ಮಾಡುವುದಕ್ಕೆ ಹೋಗಿ, ಏಕೆಂದರೆ ಇವರು ಕೆಲವುಸಾರಿ ಯಾರಾದರೂ ನಮ್ಮನ್ನು ಒದೆಯಲಿ, ಯಾರಾದರೂ ನಮ್ಮನ್ನು ಮುಟ್ಟಲಿ ಅಂತಲೇ ಇದನ್ನು ಮಾಡುತ್ತಾರೆ. ಏಕೆಂದರೆ ಹಾಗೆ ಮಾಡಿದಕೂಡಲೇ ಮತ್ತಷ್ಟು ಸೇಲ್ಸ್ ಜಾಸ್ತಿಯಾಗುತ್ತದೆ. ಸರ್ಕ್ಯುಲೇಷನ್ ಜಾಸ್ತಿಯಾಗುವುದಕ್ಕೆ ಈ ಎಲ್ಲಾ ದೊಂಬರಾಟ, ತುಂಟಾಟ. ಇದನ್ನು ಸದನದ

ಎಲ್ಲರೂ ಒಪ್ಪುತ್ತೀರಿ. ಆದರಲ್ಲೂ ಮಹಿಳೆಯರ ಬಗ್ಗೆ ನಾನು ಓದಿಲ್ಲ, ನಾನು ಓದುವುದೂ ಇಲ್ಲ. ಅಂತಹವನ್ನು ಓದಲೂ ಬಾರದು. ಅದು ಏನಾದರೂ ಕಕ್ಕಸ್ಸಿನಲ್ಲಿ ಉಪಯೋಗಿಸುವುದಕ್ಕೆ ಯೋಗ್ಯವಾದದ್ದು, ಓದಬಾರದು. ಅದಕ್ಕೆ ಮಹಿಳೆಯರ ಬಗ್ಗೆ ಈ ತರಹ ಬರೆದಿದ್ದಾರೆ ಎಂದು ಪ್ರಮೀಳಾ ಅವರು ಮಾತನಾಡುವಾಗ ನಾನು ಇರಲಿಲ್ಲ. ಶ್ರೀಮತಿ ಜ್ಯೋತಿರೆಡ್ಡಿಯವರು ಮಾತನಾಡುವಾಗ ನನ್ನ ಚೇಂಬರ್‌ನಲ್ಲಿ ಕೇಳುತ್ತಾ ಇದ್ದೆ. She did a wonderful explanation. I was really moved. ಅದಕ್ಕೆ ನಾವು ಈಗ ಏನಾದರೂ ಮಾನ್ಯ ನಂಜೇಗೌಡರು ಹೇಳಿದಹಾಗೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಒಪ್ಪುತ್ತಾರೆ. We should do something to prevent such a vulgarity, the spread of vulgarity in the society. We should stop this. ಕರಪ್ಷನ್ ಬಗ್ಗೆ ಬರೆಯಲಿ. ಅವರು ನನ್ನ ಅಭ್ಯಾಸಗಳ ಬಗ್ಗೆ ಎಲ್ಲಾ ಬರೆದರು. ಇದು ಏನು ಬರೆದರೂ ಏನೂ ಆಗುವುದಿಲ್ಲ. ಆ ಮಾತು ಬೇರೆ. ಆದರೆ ರಾಜಕೀಯವಾಗಿ ಸರ್ಕಾರ ತಪ್ಪು ಮಾಡಿದ್ದರೆ, ನೀತಿಗಳು ತಪ್ಪು ಮಾಡಿದ್ದರೆ ಅಥವಾ ಭ್ರಷ್ಟಾಚಾರ ಏನಾದರೂ ಕಣ್ಣಿಗೆ ಕಾಣುವಹಾಗೆ ಆಗಿದ್ದರೆ ಅದನ್ನು ಬರೆಯಲಿ. ಅದನ್ನು ಚರ್ಚೆ ಮಾಡೋಣ, ತಿದ್ದೋಣ. ಅದು ಎಲ್ಲಾ ಸರಿ. ಆದರೆ ಇದು ಬಹಳ ಹೊಲಸಾಗಿದೆ. ಅದಕ್ಕೆ ತಾವು ಈಗ ಏನು ಮಾಡಬೇಕು ಎಂದು ಒಳಗೆ ಕರೆದರೆ ಎಲ್ಲರೂ ಕುಳಿತು ಅದನ್ನು.....

MR. SPEAKER : We will stop here. Moving of resolution according to Rule 195, we will take it up little later. The House is with you. ಈಗ ನಾನು ಅಡ್ಜರ್ನ್ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗ ನಮ್ಮ ಅನಿಸಿಕೆಯನ್ನು ಹೇಳುವುದಕ್ಕೆ ನಾವು ಧರಣಿ ಕುಳಿತುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ ಏನೂ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ಸದನ ನಿಮ್ಮ ಜೊತೆಗೆ ಇದೆ. ನೀವು ಮಾತ್ರ ವೆಲ್‌ಗೆ ಹೋದರೆ ನಾವೆಲ್ಲಾ ಇಲ್ಲೇ ನಿಂತುಕೊಳ್ಳಬೇಕಾ?

MR. SPEAKER : It is an honour to women members of this House. ಇದೊಂದು ಗೌರವ ನಿಮಗೆ. We will come back.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಡೀ ಸದನ ನಿಮ್ಮ ಜೊತೆಗೆ ಇರುವಾಗ.....

ಅಧ್ಯಕ್ಷರು : ಹೌದು, ಇಡೀ ಸದನ ನಿಮ್ಮ ಜೊತೆಗೆ ಇದೆ. I will take the consensus of all the Senior Leaders of this House. We will arrive at some immediate decision as to how to proceed. Kindly co-operate with us. ಈಗ ನಾನು ಅಡಜರ್ನ್

ಮಾಡಿರುತ್ತೇನೆ. ಈಗ ಸಭೆಯನ್ನು ಮುಂದೂಡಲಾಗಿದೆ ಮತ್ತು ಪುನಃ 1-30 ಗಂಟೆ ಎಂದರೆ ಊಟದ ಟೈಮ್ ಬರುತ್ತದೆ. ಆದ್ದರಿಂದ 2-30 ಗಂಟೆಗೆ ಸೇರೋಣ. ಪುನಃ 2-30 ಗಂಟೆಗೆ ನಾವು ಸಮಾವೇಶಗೊಳ್ಳೋಣ.

(ಸದನವು 1 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2-30 ಗಂಟೆಗೆ ಸೇರಲು ನಿರ್ಧರಿಸಿತು).

(ಸದನವು ಪುನಃ ಸಂಜೆ 5.30 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಪೀಠವನ್ನಲಂಕರಿಸಿದ್ದರು).

ನಿಯಮ 195ರ ಪ್ರಕಾರ ಹಕ್ಕುಚ್ಯುತಿ ಪ್ರಸ್ತಾವದ ಮಂಡನೆ ಹಾಗೂ ಅಂಗೀಕಾರ

ಅಧ್ಯಕ್ಷರು : ಈಗ ರೂಲ್ 195ರ ಪ್ರಕಾರ ತಾವು ಮೋಷನ್ ಮೂವ್ ಮಾಡಬೇಕು.

\+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೆ, ರೂಲ್ 194ರ ಪ್ರಕಾರ ತಾವು ಅನುಮತಿ ಕೊಟ್ಟು, ರೂಲ್ 195ರ ಪ್ರಕಾರ ಮೋಷನ್ ಮೂವ್ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ನನಗೆ ಬಹಳ ಸಂತೋಷವಾಗಿದ್ದು, ನಾನು ಈ ಮೋಷನ್‌ನ್ನು ಎಲ್ಲಾ ಮಹಿಳಾ ಶಾಸಕರ ಪರವಾಗಿ ಮೂವ್ ಮಾಡುತ್ತಿದ್ದೇನೆ. ನಾನು ಮೋಷನ್ ಮೂವ್ ಮಾಡಿ ಅದರ ಬಗ್ಗೆ ಆಮೇಲೆ ಸವಿಸ್ತಾರವಾಗಿ ಹೇಳುವವಳಿದ್ದೇನೆ. I move a substantive motion under Rule 195 of the Rules of Procedure and Conduct of Business in the Karnataka Legislative Assembly:

"The House is of the opinion, that the publisher, the Editor and the Reporter of `Lakesh Pathrike' a Kannada weekly magazine, published from Bangalore, in their issue dated 3rd September 1997 has committed breach of privilege in respect of the following Hon. Lady Members of this august House viz.,

1) Smt. S. Pramila
2) Smt. Leeladevei R. Prasad
3) Smt. Vimalabai Deshmukh
4) Smt.Vijayalakshmi Bandisiddegowda
5) Smt. D.G. Hemavathi
6) Smt. N. Jyothi Reddy.

and further the breach of privilege of the House also has been committed.